ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 4, ಸಂಚಿಕೆ 2, ಡಿಸೆಂಬರ್ 2025

SHRIDEVI ANTARANGA
Monthly Magazine



ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್ ಇಂಗ್ಲಿಷ್ ಆವೃತ್ತಿ ಸಂಪಾದಕರು: ಕೃಷ್ಣ ವಿ.



## ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

ಡಾ. ಪಳನಿವೇಲು ಹೇಳುತ್ತಾರೆ: "ಜೀವನವು ಪ್ರೀತಿಯಿಂದ ಮುಗುಳ್ನಗುತ್ತದೆ. ದಯೆಯಿಂದ ಜೀವನವು ಪಿಸುಗುಟ್ಟುತ್ತದೆ. ಜೀವನದಲ್ಲಿ ನೀವು ಸಾಲವನ್ನು ಮರುಪಾವತಿ ಮಾಡಬಹುದು. ಅದಕ್ಕೆ ಒಂದು ಮಾರ್ಗವಿದೆ. ಬೇರೆಯವರಿಗೆ ಒಳ್ಳೆಯದನ್ನು ಮಾಡಿ".

# ಅದಮ್ಯ ಸಾಹಸಿ, ಪ್ರಯೋಗಶೀಲತೆ ಮತ್ತು ಮಾನವೀಯತೆಯ ಸಾಕಾರಮೂರ್ತಿ ಡಾ. ಸಿ. ಪಳನಿವೇಲು



### ಸಾಧನೆಯ ಮೆಟ್ಟಲುಗಳು

- ವಿಶ್ವದ ಪ್ರಸಿದ್ಧ ಲ್ಯಾಪ್ರೋಸ್ಕೋಪಿಕ್ ಮತ್ತು ರೋಬೋಟಿಕ್ ಶಸ್ತ್ರಚಿಕಿತ್ಸಕರು.
- ತಮ್ಮ ಆವಿಷ್ಕಾರಗಳಿಂದ ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆಯನ್ನು ಬಡವರ ಬಳಿಗೆ ತಂದವರು.
- ಲ್ಯಾಪ್ರೋಸ್ಕೋಪಿಕ್ ಮತ್ತು ರೋಬೋಟಿಕ್ ಶಸ್ತ್ರಚಿಕಿತ್ಸೆಗಳ ಮೂಲಕ ಕ್ಯಾನ್ಸರ್‌ನ್ನು ಗುಣಪಡಿಸಬಹುದು ಎಂದು ಸಾಬೀತು ಮಾಡಿದವರು. (ಈ ಲ್ಯಾಪ್ರೋಸ್ಕೋಪಿಕ್ ವಿಧಾನವನ್ನು ಇತರ ಶಸ್ತ್ರಚಿಕಿತ್ಸೆಯಲ್ಲಿಯೂ ಬಳಸುತ್ತಾರೆ).
- ವಿಶ್ವದ ಎಲ್ಲೆಡೆ ನಡೆದ ಅಂತಾರಾಷ್ಟ್ರೀಯ ಲ್ಯಾಪ್ರೋಸ್ಕೋಪಿಕ್ ಕಾರ್ಯಾಗಾರದಲ್ಲಿ ಭಾಗವಹಿಸಿ ಭಾರತಕ್ಕೆ ಕೀರ್ತಿ ತಂದಿರುವವರು.
- ವೈದ್ಯಕೀಯ ಕ್ಷೇತ್ರದಲ್ಲಿ 250 ವೈಜ್ಞಾನಿಕ ಪ್ರಬಂಧಗಳನ್ನು ಪ್ರಕಟಿಸಿರುವವರು.
- ಲೆಪ್ರೊಸ್ಕೋಪಿಕ್ ಕುರಿತಂತೆ ನಾಲ್ಕಾರು ಆಕರ ಗ್ರಂಥಗಳನ್ನು ರಚಿಸಿರುವವರು.
- ಇಂಗ್ಲೆಂಡ್‌ನ ಪ್ರತಿಷ್ಠಿತ 'ರಾಯಲ್ ಕಾಲೇಜ್'ನಿಂದ ಫೆಲೋಶಿಪ್ ಪಡೆದವರು.
- ತಮ್ಮ ಸಾಧನೆಗಾಗಿ ಎರಡು ಸಲ ಭಾರತ ಸರ್ಕಾರದಿಂದ ಡಾ ಬಿ. ಸಿ. ರಾಯ್ ರಾಷ್ಟ್ರೀಯ ಪುರಸ್ಕಾರಕ್ಕೆ ಪಾತ್ರರಾದವರು


ಹೀಗೆ ಹತ್ತಾರು ವೈಶಿಷ್ಟ್ಯಗಳನ್ನು ಡಾ. ಸಿ. ಪಳಿನಿವೇಲು ಅವರು ಹೊಂದಿದ್ದಾರೆ. ಇನ್ನು ಭಾರತದ ಶಸ್ತ್ರಚಿಕಿತ್ಸಾಲೋಕದಲ್ಲಿ ಅವರು ದಂತಕತೆಯಾಗಿದ್ದಾರೆ. ಅವರು ತಮ್ಮ ಆತ್ಮಕಥೆಯನ್ನು ಗಟ್ಸ್ (Guts) ಎನ್ನುವ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಇದು ವೈದ್ಯಕೀಯ ಲೋಕದಲ್ಲಿ ಒಂದು ಅಪರೂಪದ ಗ್ರಂಥವೆಂದು ಭಾರತದ ಎಲ್ಲೆಡೆ ಪ್ರಸಿದ್ಧವಾಗಿದೆ.

### ಕನ್ನಡಕ್ಕೆ ಬಂದ ಕರ್ಮಯೋಗಿ

ಇಂತಹ ಮಹತ್ತ್ವದ ಕೃತಿಯನ್ನು ಡಾಕ್ಟರ್ ದುರ್ಗಾದಾಸ್ ಅಸ್ರಣ್ಣ, ಡಾ. ಈಶ್ವರ್ ಹೊಸಮನಿ, ಡಾ ಕಸ್ತೂರಿ ದೋಣಿಮಠ ಮತ್ತು ಡಾ. ವೀಣಾ ಎಸ್. ಮಠ ಅವರುಗಳು ಕನ್ನಡಕ್ಕೆ ತಂದಿದ್ದಾರೆ. 385 ಪುಟಗಳಿರುವ ಈ ಕೃತಿ 2024ರಲ್ಲಿ ಮೊದಲ ಪ್ರಕಟಣೆಯನ್ನು ಕಂಡಿದೆ. ಇದರ ಪ್ರಕಾಶಕರು ಭದ್ರಾವತಿಯ ವಿ.ಸಿ. ಪಬ್ಲಿಕೇಶನ್ ಅವರು. ಗ್ರಂಥದ ಬೆಲೆ 250 ರೂ. ಇದೊಂದು ಅಮೂಲ್ಯ ಕೃತಿ. ವೈದ್ಯರಿಗೆ ಮಾತ್ರವಲ್ಲ, ಜನಸಾಮಾನ್ಯರು ಕೂಡ ಓದಿ ತಿಳಿದುಕೊಳ್ಳಬೇಕಾದ ಅನೇಕ ವಿಚಾರಗಳು ಈ ಗ್ರಂಥದಲ್ಲಿವೆ. ಈ ನಾಲ್ವರು ಅನುವಾದಕರು ಈ ಕೃತಿಯನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡಭಾಷೆಗೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಇದಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಇದೊಂದು ಸಾಹಸದ ಕೆಲಸವಾಗಿದ್ದು, ಅವರ ಶ್ರಮವನ್ನು ಗುರುತಿಸಬಹುದಾಗಿದೆ.

▶▶ 2ನೇ ಪುಟಕ್ಕೆ...

## ಶ್ರೀದೇವಿ ವೈದ್ಯಕೀಯ ಕಾಲೇಜಿನ ಮೂಲಕ ಸ್ನಾತಕೋತ್ತರ ಪದವಿ ಪಡೆದವರು



Dr. AMULYA R RAO, M.D. Anesthesia
Dr. LUBNA N SAMIULLA, M.D. Anesthesia
Dr. B NITHESHA, M.D. Anesthesia
Dr. SYEDA SANIYA, M.D. Anesthesia
Dr. ASHVINI U N, M.D. Dermatology
Dr. THRUPTHI N S, M.D. Emergency Medicine
Dr. ARCHANA MP, M.S. ENT
Dr. SWETHA JANGALA, M.S. ENT
Dr. DIVYA N, M.D. Medicine
Dr. NAVEEN S PATIL, M.D. Medicine
Dr. SHEKHAR JAWALGE, M.D. Medicine
Dr. NIKITA LAISHRAM, M.S. Obstetrics & Gynecology
Dr. SANJANA SHEKHAR, M.S. Obstetrics & Gynecology
Dr. RAKHESH ANTARATANI, M.S. Obstetrics & Gynecology
Dr. KRUTHI T K, M.S. Ophthalmology
Dr. POOJA J P, M.S. Ophthalmology
Dr. VEGGALAM CHANDANA, M.S. Ophthalmology
Dr. ANURAG SHARMA, M.S. Orthopedics
Dr. ATUL KANT CHOUDHARY, M.S. Orthopedics
Dr. RAGHAVENDRA H, M.S. Orthopedics
Dr. NEKKANTI C BHARATHI, M.D. Pediatrics
Dr. SHYAM PRASAD S, M.D. Pediatrics
Dr. TELLAPALI R GANDHI, M.D. Pediatrics
Dr. AKSHAY ESHWAR, M.D. Psychiatry
Dr. MONICA V DOLLI, M.D. Psychiatry
Dr. ASHA LATHA H R, M.D. Radio Diagnosis
Dr. ANUSHA PALAPARTHI, M.D. Radio Diagnosis
Dr. MOHD AQUIB KHAN, M.D. Radio Diagnosis
Dr. DHAVAL NARENDRA MODI, M.D. Respiratory Medicine
Dr. HARSHA THILAK H N, M.S. Surgery
Dr. SHRIKANT M KALUSE, M.S. Surgery
Dr. SUMEDH R, M.S. Surgery
Dr. VIGNESH A M, M.S. Surgery

# ಉತ್ತಮ ಆರೋಗ್ಯ ಸೇವೆ ದೇಶದ ಬೆನ್ನೆಲುಬು

ವರದಿ: ಕೆ.ಎಸ್. ರಾಜಮನ್ನಾರ್

'ಆರೋಗ್ಯ ಸೇವೆ ದೇಶದ ಬೆನ್ನೆಲುಬು' ಎಂದು ಜೆ.ಎಸ್.ಎಸ್.ಉನ್ನತ ಶಿಕ್ಷಣ ಅಕಾಡೆಮಿ ಕುಲಪತಿ ಡಾ. ಹೆಚ್ ಬಸವನಗೌಡಪ್ಪ ಅವರು ಹೇಳಿದ್ದಾರೆ.

ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಡಿಸೆಂಬರ್ 6 ರಂದು ಜರುಗಿದ ಪಿ.ಜಿ. ವಿದ್ಯಾರ್ಥಿಗಳ ಮೂರನೇ ಘಟಿಕೋತ್ಸವ ಸಮಾರಂಭದಲ್ಲಿ ಪ್ರಧಾನ ಭಾಷಣ ಮಾಡುತ್ತಾ, "ವೈದ್ಯಕೀಯ ಲೋಕದಲ್ಲಿ ಆಗುತ್ತಿರುವ ಹೊಸ ಬೆಳವಣಿಗೆ, ಅವಿಷ್ಕಾರ ಮತ್ತು ವೃತ್ತಿನಿರತ ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಅನುಸರಿಸಬೇಕಾದ ಮಾನವೀಯ ಮೌಲ್ಯ, ಬದುಕಿನ ದಾರಿಯ ಬಗ್ಗೆ ಚಿಂತನೆ ಅಗತ್ಯ. ಯಾವುದೇ ದೇಶ ಅಭಿವೃದ್ಧಿಯತ್ತ ದಾಪುಗಾಲು ಹಾಕಬೇಕಾದರೆ ಅಲ್ಲಿನ ಆರೋಗ್ಯ ವ್ಯವಸ್ಥೆ ಉತ್ತಮವಾಗಿರಬೇಕು ಮತ್ತು ಕೈಗೆಟಕುವ ದರದಲ್ಲಿ ಗುಣಮಟ್ಟದ ವೈದ್ಯಕೀಯ ಸೇವೆ ಜನರಿಗೆ ಲಭ್ಯವಾಗಬೇಕು. ಈ ನಿಟ್ಟಿನಲ್ಲಿ ದೇಶದ ವೈದ್ಯಕೀಯ ಕಾಲೇಜುಗಳು ಮತ್ತು ಸಂಶೋಧನಾ ಸಂಸ್ಥೆಗಳು ಹೆಚ್ಚಿನ ಜವಾಬ್ದಾರಿ ನಿರ್ವಹಿಸಬೇಕಾಗಿದೆ. ವೈದ್ಯಕೀಯ ಲೋಕದ ಯಶಸ್ಸು ಮನುಷ್ಯನ ವೃತ್ತಿ ನಿಪುಣತೆ ಮೇಲೆ ನಿರ್ಣಾಯಕವಾಗಿದೆಯೇ ಹೊರತು ತಂತ್ರಜ್ಞಾನದ ಮೇಲಲ್ಲ. ಹೊಸ ಅವಿಷ್ಕಾರಗಳಿಂದಾಗಿ ತಂತ್ರಜ್ಞಾನ ಎಷ್ಟೇ ಉನ್ನತಿಗೊಂಡರೂ ವೈದ್ಯಕೀಯ ಚಿಕಿತ್ಸೆಯಲ್ಲಿ ಮನುಷ್ಯನ ಬುದ್ಧಿಶಕ್ತಿ ನಿರ್ಣಾಯಕ. ಆರ್ಟಿಫಿಶಿಯಲ್ ಇಂಟಲಿಜೆನ್ಸ್, ರೋಬೋಟಿಕ್ ತಂತ್ರಜ್ಞಾನ ಇತ್ಯಾದಿಗಳು ಮನುಷ್ಯನ ಸಾಮರ್ಥ್ಯಗಳಿಗೆ ಪೂರಕವಾಗುತ್ತವೆ. ಆದರೆ ಅವು ರೋಗ ದೃಢೀಕರಣ, ಚಿಕಿತ್ಸೆ ಸಂದರ್ಭಗಳಲ್ಲಿ ಮನುಷ್ಯ ನಿರ್ವಹಿಸಬೇಕಾದ ಪಾತ್ರಕ್ಕೆ ಎಂದೂ ಪರ್ಯಾಯವಾಗಲಾರವು.

▶▶ 3ನೇ ಪುಟಕ್ಕೆ...

▶▶ ಮೊದಲನೇ ಪುಟದಿಂದ

ನನ್ನ ಆತ್ಮಕಥನ 'ಅಂತರಂಗದ ಅವಲೋಕನ' ಕೃತಿಯಲ್ಲಿ ನಾನು ಹತ್ತಾರು ಆಪರೇಷನ್‌ಗಳನ್ನು ವಿವರಿಸಿದ್ದೇನೆ. ಪ್ರತಿಯೊಂದು ಆಪರೇಷನ್ ವಿಚಾರ ಬರೆಯುವಾಗ ಕನ್ನಡದಲ್ಲಿ ಅದಕ್ಕೆ ಸೂಕ್ತವಾದ ವಿವರಣೆ ಕೊಡಲು ಶಬ್ದಗಳಿಗಾಗಿ ಹುಡುಕಾಟ ನಡೆಸಿದ್ದೆ. ಒಮ್ಮೊಮ್ಮೆ ಇಂಗ್ಲಿಷ್ ಶಬ್ದಗಳನ್ನೇ ಬಳಸಿಕೊಂಡಿದ್ದೇನೆ. ವೈದ್ಯಕೀಯ ಉಪಕರಣದ ವಿಚಾರದಲ್ಲೂ ಇದೇ ಮಾದರಿಯನ್ನು ಅನುಸರಿಸಿದ್ದೇನೆ. ಪ್ರಸ್ತುತ ಕೃತಿಯಲ್ಲಿ ನಿರಂತರವಾಗಿ ಶಸ್ತ್ರಚಿಕಿತ್ಸೆಯ ವಿವರಗಳು ಬರುತ್ತವೆ. ಅವುಗಳನ್ನೆಲ್ಲವನ್ನು ಸಮರ್ಥವಾಗಿ ಅರ್ಥ ಮಾಡಿಕೊಂಡಿರುವ ಅನುವಾದಕರು ಅತ್ಯಂತ ಸರಳ ರೀತಿಯಲ್ಲಿ ಅವುಗಳನ್ನು ಓದುಗರಿಗೆ ಮುಟ್ಟಿಸಿದ್ದಾರೆ.

### ಮಾರ್ಗದರ್ಶಕ ಕೃತಿ

ಕರ್ನಾಟಕ ಸರ್ಕಾರ ಇಂತಹ ಅಮೂಲ್ಯ ಕೃತಿಯನ್ನು ರಾಜ್ಯದ ಎಲ್ಲ ವೈದ್ಯಕೀಯ ಸಂಸ್ಥೆಗಳಿಗೂ ಮುಟ್ಟಿಸಬೇಕು. ಇದು ಕೇವಲ ಶಸ್ತ್ರಚಿಕಿತ್ಸಕರು ಮಾತ್ರ ಓದುವ ಗ್ರಂಥ ಇದಲ್ಲ. ವೈದ್ಯಕೀಯ ಲೋಕದಲ್ಲಿ ಕೆಲಸ ಮಾಡುವ ಎಲ್ಲರೂ ಇದನ್ನು ಅತ್ಯಗತ್ಯವಾಗಿ ಓದಲೇಬೇಕಾದ ಗ್ರಂಥ. ಶಸ್ತಚಿಕಿತ್ಸಾ ಕ್ಷೇತ್ರದಲ್ಲಿ ಶರವೇಗದಿಂದ ಆಗುತ್ತಿರುವ ಬದಲಾವಣೆಯನ್ನು ತಿಳಿಯಲು ಈ ಗ್ರಂಥ ಮಾರ್ಗದರ್ಶನ ನೀಡುತ್ತದೆ. ಈ ಗ್ರಂಥದ ಸಾರಾಂಶವನ್ನು ಇಲ್ಲಿ ನೀಡಿದ್ದೇನೆ.

ಈ 'ಗಟ್ಸ್' ಗ್ರಂಥದಲ್ಲಿ 49 ಅಧ್ಯಾಯಗಳಿವೆ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಈ ಗ್ರಂಥಕ್ಕೆ ಮುನ್ನುಡಿ ಬರೆದಿದ್ದಾರೆ. ಅವರು "ಡಾ. ಪಳನಿವೇಲು ಅವರ ಶಸ್ತ್ರಚಿಕಿತ್ಸೆಯ ನೈಪುಣ್ಯ, ವೃತ್ತಿಕೌಶಲ್ಯ ಹಾಗೂ ಜನಪರ ಕಾಳಜಿ ಇಂದಿನ ಯುವವೈದ್ಯರಿಗೆ ಮತ್ತು ಶಸ್ತ್ರಚಿಕಿತ್ಸಕರಿಗೆ ದಾರಿದೀಪವಾಗಲಿ" ಎಂದು ಆಶಿಸಿದ್ದಾರೆ.

ನ್ಯೂಯಾರ್ಕ್ ಲ್ಯಾಪ್ರೋಸ್ಕೋಪಿಕ್ ಸರ್ಜರಿ ವಿಭಾಗದ ಮುಖ್ಯಸ್ಥರಾದ ಡಾ ಬ್ಯಾರಿ ಸಲ್ಕಿ, ಟೋಕಿಯೋ ವೈದ್ಯಕೀಯ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ. ಯುಚಿನಗಕಾವಾ, ಬಾಂಬೆಯ ಹಾಸ್ಪಿಟಲ್ ಇನ್ಸಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನ ಪ್ರೊ. ವಿನಾಯಕ ನಾಗೇಶ್ ಶ್ರೀಖಂಡೆ, ಇಸ್ರೋ ಉಪಗ್ರಹದ ಕೇಂದ್ರದ ವಿಜ್ಞಾನಿ ಮೈಲುಸ್ವಾಮಿ ಅಣ್ಣದೊರೈ ಮೊದಲಾದವರು 'ತಮ್ಮ ಮಾತುಗಳಲ್ಲಿ' ಡಾ. ಪಳಿನಿವೇಲು ಅವರ ಆತ್ಮಕಥನದ ವೈಶಿಷ್ಟ್ಯಗಳನ್ನು ಸಮರ್ಥವಾಗಿ ಗುರುತಿಸಿದ್ದಾರೆ.

ಭಾರತದ ಮಾಜಿ ರಾಷ್ಟ್ರಪತಿ, ಭಾರತದಲ್ಲಿ ಮಿಸ್ಸೈಲ್ ರೂವಾರಿ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಅವರು ಹೇಳುತ್ತಾರೆ: "ನಿಮ್ಮ ಕಥೆ ಸಾಕಷ್ಟು ಆಕರ್ಷಕವಾಗಿದೆ ಹಾಗೂ ಆಸಕ್ತಿದಾಯಕವಾಗಿದೆ. ಯುವ ಪೀಳಿಗೆಗೆ ಪ್ರೇರಣೆ ದೊರೆಯಬಹುದು".

### ಕವಿ ಹೃದಯದ ವೈದ್ಯರು

ಡಾ. ಸಿ. ಪಳನಿವೇಲು ಅವರ ಆತ್ಮಕಥನದ ಸುತ್ತ ಅವರ ಕವಿ ಹೃದಯ ಮಿಡಿಯುತ್ತಿದೆ. ಅವರಲ್ಲಿ ನುರಿತ ಶಸ್ತ್ರಚಿಕಿತ್ಸಕನು ಮಾತ್ರವಲ್ಲ, ಭಾವುಕ ಕವಿಯೊಬ್ಬನೂ ಸೇರಿಕೊಂಡಿದ್ದಾನೆ.

ಶ್ರೀಯುತರ ಆತ್ಮಕಥನವನ್ನು ತೆರೆದ ತಕ್ಷಣ 'ಏನಿಲ್ಲ' ಎನ್ನುವ ಕವನ ಕಾಣಿಸುತ್ತದೆ. ಈ ಕವನ ಪಳಿನಿವೇಲು ಅವರ ಬದುಕನ್ನು ಚಿತ್ರಿಸುತ್ತದೆ. ಕೊನೆಯ ಸಾಲುಗಳಲ್ಲಿ ಬರುವ ವೇದಾಂತದ ಮಾತುಗಳನ್ನು ನೋಡಿ:

**ಏನಿಲ್ಲ**

**ನನ್ನದೆಂಬುದು ಏನೂ ಇಲ್ಲ**
**ಇರುವುದು ಅದೋ**
**ಆ ಅನಂತ ವೈಶಾಲ್ಯದ ಧ್ವನಿ ಮಾತ್ರ.**

### ಗ್ರಾಮೀಣ ಭಾರತದ ಮಗು

1950 ಫೆಬ್ರವರಿ ತಿಂಗಳ 4ರಂದು 'ಮುಂಜಾವು' ಚಿನ್ನುಸ್ವಾಮಿ ಮತ್ತು ಕಾಳಿಯಮ್ಮಾಳ್ ಕೃಷಿಕಾರ್ಮಿಕ ದಂಪತಿಗಳ

# ಅದಮ್ಯ ಸಾಹಸಿ, ಪ್ರಯೋಗಶೀಲತೆ ಮತ್ತು ಮಾನವೀಯತೆಯ ಸಾಕಾರಮೂರ್ತಿ ಡಾ. ಸಿ. ಪಳನಿವೇಲು




ಎರಡನೆಯ ಮಗುವಾಗಿ ಗುಡಿಸಲೊಂದರಲ್ಲಿ ಪಳನಿವೇಲುವವರು ಜನಿಸುತ್ತಾರೆ. ತಂದೆ ಮದ್ಯವ್ಯಸನಿ ಹಾಗೂ ನಿರಂತರ ಧೂಮಪಾನ ಮಾಡುತ್ತಿದ್ದವರು. ಮಕ್ಕಳ ರಕ್ಷಣೆಗಾಗಿ ನಿರಂತರವಾಗಿ ಹೋರಾಡುತ್ತಿರುವ ಗ್ರಾಮೀಣ ಮಹಿಳೆಯಾಗಿ ಕಾಳಿಯಮ್ಮಾಳ್ ಕಂಡುಬರುತ್ತಾರೆ. ಆ ಕಾಲದಲ್ಲಿ ಹುಟ್ಟಿದವರಲ್ಲಿ ಬಹುಮಟ್ಟಿನವರ ಬದುಕು ಇದಾಗಿತ್ತು. ಡಾ. ಪಳನಿವೇಲು ಅವರು ತಮ್ಮ ಬಾಲ್ಯದ ಬಡತನವನ್ನು ಚಿತ್ರಿಸುವುದರ ಜೊತೆಗೇ ಆ ಕಾಲದ ಭಾರತದ ಸಾಮಾಜಿಕ ಹಾಗೂ ಆರ್ಥಿಕ ಚಿತ್ರಣವನ್ನು ಕೂಡ ತಮ್ಮ ಗ್ರಂಥದಲ್ಲಿ ಕೊಡುತ್ತಾರೆ. ಅವರ ಹುಟ್ಟೂರು ಸೇಲಂ ಜಿಲ್ಲೆ, ನಾಮಕ್ಕಲ್ ತಾಲೂಕ್ ಆವಾರಂಗಟ್ಟು ಪುದೂರ್.

ಕೃಷಿ ಕಾರ್ಮಿಕರಾಗಿದ್ದ ಚಿನ್ನುಸ್ವಾಮಿ ಕುಟುಂಬ ಕೆಲಸ ಹುಡುಕಿಕೊಂಡು ಪೆನ್ನಾಂಗ್‌ಗೆ (ಮಲಯ ದೇಶಕ್ಕೆ) ವಲಸೆ ಹೋಯಿತು. ಇವರ ಹಾಗೆ ಅನೇಕ ತಮಿಳು ಕುಟುಂಬಗಳು ವಲಸೆ ಹೋಗಿದ್ದವು. ಅಲ್ಲಿನ ರಬ್ಬರ್ ತೋಟ ಮತ್ತು ತಾಳೆ ಎಣ್ಣೆ ಎಸ್ಟೇಟ್‌ಗಳಲ್ಲಿ ಕೆಲಸ ಮಾಡಲು ಈ ಕುಟುಂಬಗಳು ತೆರಳುತ್ತಿದ್ದವು. ಬಾಲಕ ಪಳನಿವೇಲು ಅವರು ಅಲ್ಲಿನ ಎಸ್ಟೇಟ್ ಶಾಲೆಗೆ ಸೇರಿದರು. ಎಸ್ಟೇಟ್‌ನ ಮ್ಯಾನೇಜರ್ ದೊರೈ ಒಮ್ಮೆ ಹತ್ತು ವರ್ಷದ ಬಾಲಕ ಪಳನಿವೇಲು ಅವರ ಸ್ವಾಭಿಮಾನವನ್ನು ಕೆರಳಿಸಿದರು. ಬಡವರ ಸಿಟ್ಟನ್ನು ಯಾರು ಗುರುತಿಸುತ್ತಾರೆ? ಅವರೇ ನುಂಗಿಕೊಳ್ಳಬೇಕು. ಅದನ್ನೇ ಪಳನಿವೇಲು ಮಾಡಿದರು.

### ಮನದಲ್ಲಿ ಮೂಡಿದ ಛಲ

ಆಗ ಬಾಲಕ ಪಳನಿವೇಲು ಅವರಲ್ಲಿ ತಾನು ಭಾರತಕ್ಕೆ ಹಿಂದಿರುಗಿ ಶಿಕ್ಷಣವನ್ನು ಮುಂದುವರಿಸಬೇಕೆಂಬ ಮಹತ್ತ್ವದ ಆಕಾಂಕ್ಷೆ ಹುಟ್ಟಿಕೊಂಡಿತು. ಅದನ್ನು ತಂದೆಗೆ ಹೇಳಿದಾಗ ಅವರು ಇವರನ್ನು ಕ್ರೂರವಾಗಿ ಶಿಕ್ಷಿಸುತ್ತಾರೆ. ಬಾಲ್ಯದಿಂದಲೂ ಛಲ ಬಿಡದ ಪಳನಿವೇಲು ಅವರು ತಮ್ಮ ಗುರಿಗಾಗಿ ಹಣ ಸಂಗ್ರಹಿಸಲು ಸೇಂದಿ ಮಾರಾಟಗಾರನೊಬ್ಬನ ಸಹಾಯಕರಾಗಿ ಕೆಲಸ ಮಾಡುತ್ತಾರೆ.

1967ರಲ್ಲಿ ತಮ್ಮ ತಾಯಿ, ತಂಗಿಯೊಡನೆ ತಮ್ಮೂರಿಗೆ ಬಂದು ಒಂದು ಗುಡಿಸಲಿನಲ್ಲಿ ವಾಸಮಾಡುತ್ತಿರುತ್ತಾರೆ. ಅಲ್ಲಿಗೆ ಬಂದಮೇಲೆ ಪಳನಿವೇಲು ಅವರ ತಂಗಿ ಧನಲಕ್ಷ್ಮಿ ನ್ಯೂಮೋನಿಯಾ ಕಾಯಿಲೆಯಿಂದ ಮರಣವನ್ನಪ್ಪಿದಳು. ಡಾ. ಪಳನಿವೇಲು ಮೇಲೆ ಈ ಘಟನೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿತು. ತನ್ನ ತಂಗಿ ಮೌಢ್ಯಾಚರಣೆಯಿಂದ ಪ್ರಾಣಬಿಟ್ಟಳೆಂಬ ಕಹಿ ಸತ್ಯ 17 ವರ್ಷದ ಪಳನಿವೇಲು ಅವರ ಮನದಲ್ಲಿ ಮೂಡುತ್ತದೆ. ಮುಂದೆ ತಾವು ವೈದ್ಯರಾಗಲು ಇದು ಕೂಡ ಕಾರಣವೆಂದು ಅವರು ಹೇಳುತ್ತಾರೆ.

### ಶಾಲೆಗೆ ಸೇರ್ಪಡೆ

ಮುಖ್ಯೋಪಾಧ್ಯಾಯರಾದ ವೈಯಾಪುರಿ ಅವರ ಕೃಪೆಯಿಂದ ಪಳನಿವೇಲು ಅವರು ಪ್ರೌಢಶಾಲೆಗೆ ಸೇರ್ಪಡೆಯಾದರು. ಇವರ ಶೈಕ್ಷಣಿಕ ಆಸಕ್ತಿಯನ್ನು ಗಮನಿಸಿದ್ದ ಆ ಅಧ್ಯಾಪಕರು ನಿಯಮ ಮೀರಿ ಶಾಲೆಗೆ ಪ್ರವೇಶ ಕೊಟ್ಟರು. ಪಳನಿವೇಲು ಅವರ ಬದುಕಿಗೆ ದೊರೆತ ಬಹುದೊಡ್ಡ ತಿರುವು ಇದಾಗಿತ್ತು. ಭಾನುವಾರ ನಾಮಕ್ಕಲ್ ತಾಲೂಕು ಕೇಂದ್ರಕ್ಕೆ ಹೋಗಿ ರಸ್ತೆ ಬದಿಯಲ್ಲಿ ತರಕಾರಿ ವ್ಯಾಪಾರ ಮಾಡಿ ಕುಟುಂಬಕ್ಕೆ ಆಸರೆಯಾಗುತ್ತಿದ್ದರು. ಭಾರತದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಮಾಡಿಲ್ಲವೆಂಬ ಕಾರಣದಿಂದ ಮಧ್ಯದಲ್ಲಿ ಶಿಕ್ಷಣ ಬಿಡುವ ಸಂದರ್ಭ ಬಂದಾಗ ಗಾಂಧಿವಾದಿ ಮಾರಪ್ಪನ್ ಗೌಂಡರ್ ಇವರ ಸಹಾಯಕ್ಕೆ ಬಂದು ಸರ್ಕಾರದ ಅನುಮತಿಯೊಡನೆ ಇವರು ಶಿಕ್ಷಣ ಮುಂದುವರಿಸುವಂತೆ ಮಾಡಿದರು.

### ಕೃತಜ್ಞತೆಯ ಗುಣ

ಡಾ. ಪಳನಿವೇಲು ಅವರ ವ್ಯಕ್ತಿತ್ವದ ಮತ್ತೊಂದು ವಿಶೇಷವೆಂದರೆ ತಮಗೆ ಸಹಾಯ ಮಾಡಿದ ಪ್ರತಿಯೊಬ್ಬರನ್ನು ಅವರು ತಮ್ಮ ಬದುಕಿನಲ್ಲಿ ಒಂದಲ್ಲ ಒಂದು ರೀತಿ ಜ್ಞಾಪಿಸಿಕೊಂಡಿದ್ದಾರೆ. ಶಿಕ್ಷಣ ಪಡೆಯಲು ಸಹಾಯ ಮಾಡಿದ ಅಧ್ಯಾಪಕರಾದ ವೈಯಾಪುರಿ, ಮುಖ್ಯೋಪಾಧ್ಯಾಯರಾದ ಸೇತುರಾಮನ್ ಗಾಂಧಿವಾದಿ ಮಾರಪ್ಪನ್ ಗೌಂಡರ್ ಹಾಗೂ ಸಿಲಂಬೊಳಿ ಚೆಲ್ಲಪ್ಪನ್ ಅವರ ಹೆಸರಿನಲ್ಲಿ ಶಿಕ್ಷಣ ಸಂಸ್ಥೆಯಲ್ಲಿ ಪ್ರಶಸ್ತಿ ಸ್ಥಾಪಿಸಿದ್ದಾರೆ. ತಮ್ಮ ತಂದೆ ಹೆಸರಿನಲ್ಲಿ ನಾಮಕ್ಕಲ್ ತಾಲೂಕಿನಲ್ಲಿ ಅತಿ ಹೆಚ್ಚು ಅಂಕ ಪಡೆದ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗೆ ನಗದು ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ಕೊಡುವುದರ ಜೊತೆಗೆ ಶಾಲಾ ಅಧ್ಯಾಪಕರನ್ನು ಸನ್ಮಾನಿಸಲು ಕೂಡ ಸೂಕ್ತ ನಿಧಿಯನ್ನು ಸ್ಥಾಪಿಸಿದ್ದಾರೆ.

### ಸಾಧಕರಿಗೆ ಬೇಕಾಗುವ ಮಾತು

ಡಾ. ಪಳನಿವೇಲು ಅವರು ಎಸ್.ಎಸ್. ಎಲ್.ಸಿಯಲ್ಲಿ ಅತಿಹೆಚ್ಚು ಅಂಕಗಳನ್ನು ಪಡೆದು ಮುಖ್ಯೋಪಾಧ್ಯಾಯರಾದ ಸೇತುರಾಮನ್ ಅವರ ನೆರವಿನಿಂದ ತಿರುಚ್ಚಿಯ ಸೇಂಟ್ ಜೋಸೆಫ್ ಕಾಲೇಜಿಗೆ ಪ್ರವೇಶ ಪಡೆದರು. 22ನೇ ವಯಸ್ಸಿಗೆ ಡಾ. ಪಳನಿವೇಲು ಪಿ.ಯು.ಸಿ.ಯಲ್ಲಿ ಅತ್ಯುತ್ತಮ ದರ್ಜೆಯಲ್ಲಿ ತೇರ್ಗಡೆಯಾದರು. ಈ ವಿಚಾರವನ್ನು ಆತ್ಮಕಥೆಯಲ್ಲಿ ಪ್ರಸ್ತಾಪಿಸುತ್ತ ಡಾ. ಪಳನಿವೇಲು ಅವರು ಆದರ್ಶದ ಮಾತೊಂದನ್ನು ಬರೆದಿದ್ದಾರೆ– "ಪ್ರತಿಭೆ ಎಂದರೆ ಶೇಕಡ 90ರಷ್ಟು ಪರಿಶ್ರಮ, ಶೇಕಡ 10ರಷ್ಟು ಸ್ಫೂರ್ತಿ". ಎಲ್ಲಾ ಸಾಧಕರ ಬದುಕಿನಲ್ಲೂ ಈ ಮಾತು ಸತ್ಯವೆನಿಸಿದೆ.

### ಈಡೇರಿದ ಮಹತ್ತ್ವಾಕಾಂಕ್ಷೆ

ಅಂದಿನ ಆರೋಗ್ಯ ಸಚಿವರೂ ತಮಿಳುನಾಡಿನ ಹಿರಿಯ ರಾಜಕೀಯ ಮುತ್ಸದ್ದಿ ಅನ್ಬಳಗನ್ ಅವರ ನೆರವಿನಿಂದಾಗಿ ಡಾ. ಪಳನಿವೇಲು ಅವರಿಗೆ ಮದರಾಸಿನ ಸ್ಟಾನ್ಲಿ ಮೆಡಿಕಲ್ ಕಾಲೇಜಿನಲ್ಲಿ ಸೀಟು ದೊರೆಯಿತು. ಇದರಿಂದಾಗಿ ಅವರ ಬಹುದಿನದ ಕನಸು ಈಡೇರುವ ಸಂದರ್ಭ ಬಂದಿತು. ಅಲ್ಲಿಂದ ಡಾ. ಪಳಿನಿವೇಲು ಅವರ ಪಯಣ ಪ್ರಾರಂಭವಾಯಿತು. ಡಾ. ಪಳನಿವೇಲು ಕೇವಲ ವೈದ್ಯಕೀಯ ವಿದ್ಯಾರ್ಥಿ ಅಥವಾ ತಜ್ಞ ಶಸ್ತ್ರಚಿಕಿತ್ಸಕರು ಮಾತ್ರವಲ್ಲ, ಅವರೊಬ್ಬ ಅನುಭೂತಿಯುಳ್ಳ ಸಾಧಕರು. ಎಂ.ಬಿ.ಬಿ.ಎಸ್ ಮಾಡಬೇಕಾದರೆ ಅವರು ಮೊದಲ ಸಲ ಮಾನವ ದೇಹವನ್ನು ಉಪಕರಣಗಳೊಡನೆ ವ್ಯವಹರಿಸುವಾಗ ಅವರಿಗಾದ ಅನುಭವಗಳನ್ನು ಅವರ ಮಾತುಗಳಲ್ಲಿಯೇ ಕೇಳಿ: "ಮಾನವನ ದೇಹದ ಆಂತರಿಕ ಸಂಯೋಜನೆಯನ್ನು ನೋಡಿದಾಗ ಅದರ ವ್ಯವಸ್ಥೆಯ ಸಂಕೀರ್ಣತೆಯನ್ನು ಗ್ರಹಿಸುವಾಗ ನಾನು ಸಂಪೂರ್ಣವಾಗಿ ರೋಮಾಂಚನಗೊಂಡಿದ್ದೆ. ಅದು ನಿಜವಾಗಿಯೂ ಒಂದು ಅಲೌಕಿಕ ಅನುಭವವಾಗಿತ್ತು. ನಿಧಿಯನ್ನು ತುಂಬಿದ ಗುಹೆಯೊಂದಕ್ಕೆ ನನ್ನನ್ನು ಕರೆದುಕೊಂಡು ಹೋದಂತೆ ಭಾಸವಾಯಿತು, ಸಮಾಧಿಸ್ಥಿತಿಯಲ್ಲಿರುವಂತಾಯಿತು. ಕೈಯಲ್ಲಿ ಶಸ್ತ್ರಚಿಕಿತ್ಸೆಯ ಚಾಕುವಿನೊಂದಿಗೆ ನಾನು ಮಾನವ ದೇಹವನ್ನು ಪ್ರವೇಶಿಸಿದೆ. ನಾನು ಪ್ರತಿ ಪದರವನ್ನು ಅತ್ಯಂತ ಎಚ್ಚರಿಕೆಯಿಂದ ಪರಿಶೋಧಿಸಿದೆ. ಪ್ರತಿಯೊಂದು ಉಪಪದರವನ್ನು ಕೈನಿಂದ ಮುಟ್ಟಿ ಅನುಭವಿಸುತ್ತಿದ್ದೆ. ನನ್ನ ಬೆರಳುಗಳ ತುದಿಗಳು ಮಾನವ ದೇಹವನ್ನು ಪೀಟಿಲಿನಂತೆ ಭಾವಿಸಿದ್ದವು."

ಅವರು ಶ್ರೇಷ್ಠ ಸರ್ಜನ್ ಹಾಗೂ ಒಬ್ಬ ಕರ್ಮಯೋಗಿಯಾಗಿದ್ದಾರೆ. ತಮ್ಮ ಸಾಧನೆಯ ಹಾದಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ಕಳೆದುಕೊಂಡಿರುವ ಅಧ್ಯಾತ್ಮಜೀವಿಯೂ ಆಗಿರುತ್ತಾರೆ. ವೈದ್ಯಕೀಯಕ್ಷೇತ್ರದ ಸರ್ಜರಿ ಎನ್ನುವ ಮಹಾಸಾಗರದಲ್ಲಿ ನಮ್ಮ ಬೊಗಸೆ ಅಷ್ಟೇ ನಮಗೆ ನೀರು ದೊರೆಯುತ್ತದೆ.

### ಜೀವನಾನುಭವ

ಡಾ. ಪಳನಿವೇಲು ಅವರು ತಮ್ಮ ಆತ್ಮಕಥನವನ್ನು ಶುಷ್ಕ ವೈದ್ಯಕೀಯ ವಿವರಗಳ ಗ್ರಂಥವನ್ನಾಗಿಸಿಲ್ಲ. ಇಡೀ ಗ್ರಂಥವು ಅವರ ಅನುಭವಾಮೃತದಿಂದ ತುಂಬಿದೆ. ಡಾ. ಪಳನಿವೇಲು ತಮ್ಮ ತಂದೆ ಚಿನ್ನುಸ್ವಾಮಿ ಕ್ಯಾನ್ಸರ್‌ಗೆ ತುತ್ತಾಗಿ ಆಸ್ಪತ್ರೆಯಲ್ಲಿ ಮಲಗಿದ್ದಾಗ ಅವರ ಸೇವೆ ಮಾಡಿ, ತಮಗೆ ಸಹಾಯ ಮಾಡಿದ ಮಿತ್ರರನ್ನು ಜ್ಞಾಪಿಸಿಕೊಳ್ಳುವ ಪರಿ ಅತ್ಯದ್ಭುತವಾಗಿರುತ್ತದೆ. "ಜೀವನವು ಪ್ರೀತಿಯಿಂದ ಮುಗುಳ್ನಗುತ್ತದೆ. ದಯೆಯಿಂದ ಜೀವನವು ಪಿಸುಗುಟ್ಟುತ್ತದೆ. ಜೀವನದಲ್ಲಿ ನೀವು ಸಾಲವನ್ನು ಮರುಪಾವತಿ ಮಾಡಬಹುದು. ಅದಕ್ಕೆ ಒಂದು ಮಾರ್ಗವಿದೆ. ಬೇರೆಯವರಿಗೆ ಒಳ್ಳೆಯದನ್ನು ಮಾಡಿ". ಇದು ಅವರ ಅನುಭವದ ನುಡಿ.

### ಹುಟ್ಟಿದ ಸಮಾಜದ ಋಣ ದೊಡ್ಡದು

ಡಾ. ಪಳನಿವೇಲು ಕೇವಲ ಪುಸ್ತಕದ ಹುಳುವಾಗಿರಲಿಲ್ಲ. ತಮ್ಮ ಸುತ್ತಮುತ್ತಲಿನ ಸಮಾಜವನ್ನು ನೋಡುವ ಸಂವೇದನಾಶೀಲ ವ್ಯಕ್ತಿಯಾಗಿದ್ದರು. ಅವರ ಸಮುದಾಯ ಕೊಂಗು ವೆಳ್ಳಾಲ ಅಥವಾ ವೆಳ್ಳಾಲ ಗೌಂಡರ್. ಇದು ತಮಿಳುನಾಡಿನಲ್ಲಿ ಅತ್ಯಂತ ಹಿಂದುಳಿದ ಸಮಾಜ. ಅರವತ್ತರ ದಶಕದಲ್ಲಿ ಈ ಸಮುದಾಯವನ್ನು ಹಿಂದುಳಿದವರ ಪಟ್ಟಿಯಿಂದ ಕೈ ಬಿಡಲಾಗಿತ್ತು. ಈ ಸಮುದಾಯಕ್ಕೆ ಸೇರಿದ ಐ.ಎ.ಎಸ್., ಐ.ಪಿ.ಎಸ್ ಅಥವಾ ಯಾವುದೇ ಹಿರಿಯ ರಾಜಕಾರಣಿಗಳಿರಲಿಲ್ಲ. ತಮಿಳುನಾಡಿನ ಏಳೆಂಟು ಜಿಲ್ಲೆಗಳಲ್ಲಿ ಈ ಸಮುದಾಯದ ಪ್ರಾಬಲ್ಯವಿತ್ತು. ಡಾ. ಪಳನಿವೇಲು ಅವರು ಆ ಏಳೆಂಟು ಜಿಲ್ಲೆಗಳಲ್ಲಿ ವ್ಯಾಪಕವಾದ ಸಂಚಾರವನ್ನು ಮಾಡಿ ಅನೇಕ ಸಭೆಗಳನ್ನು ನಡೆಸಿ ವಿದ್ಯಾರ್ಥಿ ಸಮುದಾಯ ಮತ್ತು ಸಾರ್ವಜನಿಕರನ್ನು ಜಾಗೃತರನ್ನಾಗಿ ಮಾಡಿ ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಮನದಟ್ಟು ಮಾಡಿಕೊಟ್ಟರು. ಅನಂತರ ಮುಖ್ಯಮಂತ್ರಿ ಕರುಣಾನಿಧಿಯವರಿಗೆ ಮನವಿಕೊಟ್ಟು ವೆಳ್ಳಾಲ ಗೌಂಡರ್ ಸಮುದಾಯವನ್ನು ಹಿಂದುಳಿದವರ್ಗದ ಪಟ್ಟಿಗೆ ಸೇರ್ಪಡೆ ಮಾಡುವಂತೆ ಮನವಿ ಮಾಡಿದರು. ಅಂತಿಮವಾಗಿ ಸರ್ಕಾರ ಇವರ ಮನವಿಗೆ ಸ್ಪಂದಿಸಿ ಈ ಸಮುದಾಯವನ್ನು ಹಿಂದುಳಿದವರ ಪಟ್ಟಿಗೆ ಸೇರಿಸಿತು.

▶▶ 7ನೇ ಪುಟಕ್ಕೆ...

ಪತ್ರಿಕೆಯ ಬಳಗ

ಸಹಾಯಕ ಸಂಪಾದಕರು
ಅಂಬಿಕಾ ಎಂ. ಹುಲಿನಾಯ್ಕರ್

ಸಂಯೋಜಕ ಸಂಪಾದಕರು
ಎಂ.ಎಸ್.ಪಾಟೀಲ್

ಸಲಹಾ ಸಂಪಾದಕರು
ಎನ್.ಭಾರತಿ

ಸಂಪಾದಕ ಮಂಡಲಿ
ಡಾ. ಭವಾನಿ ಸ್ಟಾಲಿನ್
ಡಾ. ಮನೋನ್ಮಣಿ ಎಂ.ಎಚ್
ಡಾ. ಲಾವಣ್ಯ ರಮಣ

ಸಹಾಯಕ ಸಂಪಾದಕರು:
ಎನ್. ಆನಂದ

ಪುಟ ವಿನ್ಯಾಸ:
ಸುಮಾ ಸಾಗರ್

# ಜೀವನ ಕಲಿಸುವ ಪಾಠ ವಿಶ್ವವಿದ್ಯಾಲಯದ ಶಿಕ್ಷಣಕ್ಕಿಂತ ಹೆಚ್ಚಿನದು

'ಯಾವುದೇ ಶಾಲೆ, ವಿಶ್ವವಿದ್ಯಾಲಯ ಕಲಿಸದ ಪಾಠವನ್ನು ಜೀವನ ಕಲಿಸುತ್ತದೆ' ಎಂದು ಉದ್ಯಮಿ ಬಿ.ಪಿ. ಪ್ರದೀಪ್ ಅಭಿಪ್ರಾಯಪಟ್ಟರು. ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪಿ.ಜಿ. ವಿದ್ಯಾರ್ಥಿಗಳಿಗೆ ಡಿಸೆಂಬರ್ 9ರಂದು ಏರ್ಪಡಿಸಿದ್ದ ಪದವಿಪ್ರದಾನ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು. "ಶಾಲಾ, ಕಾಲೇಜು ಪರೀಕ್ಷೆಗಳು ಆರು ತಿಂಗಳು ಅಥವಾ ವರ್ಷಕ್ಕೊಮ್ಮೆ ಬರುತ್ತವೆ. ಆದರೆ ಜೀವನದ ಪರೀಕ್ಷೆಯನ್ನು ಪ್ರತಿದಿನ, ಪ್ರತಿಕ್ಷಣ ಎದುರಿಸಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡುವುದಾದರೆ ಸಾಂಪ್ರದಾಯಿಕ ಶಿಕ್ಷಣಕ್ಕಿಂತ ಜೀವನದ ಪರೀಕ್ಷೆಯಲ್ಲಿ ಗೆಲುವು ಸಾಧಿಸುವುದು ಬಹಳ ಮುಖ್ಯವಾಗುತ್ತದೆ. ಶಿಕ್ಷಣ ಮನುಷ್ಯನನ್ನು ಎಷ್ಟು ಎತ್ತರಕ್ಕೆ ಬೇಕಾದರೂ ತೆಗೆದುಕೊಂಡು ಹೋಗುವ ಅಗಾಧಶಕ್ತಿಯನ್ನು ಹೊಂದಿದೆ. ಶಿಕ್ಷಣವು ವ್ಯಕ್ತಿಯ ಸಂಸ್ಕಾರ ಮತ್ತು ವ್ಯಕ್ತಿತ್ವಕ್ಕೆ ಹೊಸ ಹೊಳಪನ್ನು ನೀಡುತ್ತದೆ. ಎಲ್ಲರೊಂದಿಗೆ ಸ್ನೇಹ, ವಿಶ್ವಾಸ ಮತ್ತು ಉತ್ತಮ ಸಂಪರ್ಕ ಬೆಳೆಸಿಕೊಂಡರೆ ಜೀವನ ಮತ್ತು ಉದ್ಯಮದಲ್ಲಿ ಎದುರಾಗುವ ಯಾವುದೇ ಸ್ಪರ್ಧೆ, ಅಡ್ಡಿ-ಆತಂಕ ಎದುರಿಸಿ ಗುರಿಮುಟ್ಟಬಹುದು, ಪ್ರತಿಯೊಬ್ಬ ಯಶಸ್ವಿ ವ್ಯಕ್ತಿ, ಉದ್ಯಮಿಯ ಹಿಂದೆ ಶಿಕ್ಷಣದ ಪಾತ್ರ ಬಹಳವಾಗಿದೆ".

"ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ಹೆಚ್ಚು ಭಾಷೆಗಳನ್ನು ಕಲಿಯುವುದು ಬಹಳ ಅಗತ್ಯವಾಗಿದೆ. ಕರ್ನಾಟಕದಲ್ಲಿ ಕನ್ನಡವನ್ನೇ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಬಳಸಲಾಗುತ್ತಿದೆ. ಬೀದರ್ ಕನ್ನಡವೇ ಒಂದು ರೀತಿ, ಕಲಬುರಗಿ, ಚಾಮರಾಜನಗರ, ಮಂಡ್ಯ ಮತ್ತು ಕರಾವಳಿ ಪ್ರದೇಶಗಳಲ್ಲಿ ಕನ್ನಡದ ಬಳಕೆ ವಿಭಿನ್ನವಾಗಿದೆ. ಈ ಎಲ್ಲಾ ಕಾರಣಗಳಿಂದ ಹೆಚ್ಚು, ಹೆಚ್ಚು ಭಾಷೆಗಳನ್ನು ಕಲಿಯುವುದರಿಂದ ಪ್ರಗತಿಯನ್ನು ಸಾಧಿಸಬಹುದು ಅದರಲ್ಲೂ ಉದ್ಯಮದ ಯಶಸ್ಸಿಗೆ ಸಂವಹನ ಬಹಳ ಮುಖ್ಯವಾಗಿದೆ.


"ಇಂಜಿನಿಯರಿಂಗ್, ಮೆಡಿಕಲ್ ಮತ್ತು ನರ್ಸಿಂಗ್, ಪ್ಯಾರಾ-ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಶಿಕ್ಷಣರಂಗಕ್ಕೆ ಡಾ. ಹುಲಿನಾಯ್ಕರ್ ಅವರು ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಶಿಕ್ಷಣ ಸಂಸ್ಥೆಗಳನ್ನು ಹೇಗೆ ಮಾದರಿಯಾಗಿ ಕಟ್ಟಬಹುದು ಮತ್ತು ಅಚ್ಚುಕಟ್ಟಾಗಿ ಹೇಗೆ ನಡೆಸಬಹುದು ಎಂಬುದಕ್ಕೂ ಅವರು ಮಾದರಿಯಾಗಿದ್ದಾರೆ. ಅವರಿಗಿರುವ ಮುನ್ನೋಟ ಮತ್ತು ಜನಬೆಂಬಲ, ಕುಟುಂಬದ ಸಹಕಾರ ಮತ್ತು ಜನ ಸಂಪರ್ಕ, ಎಲ್ಲರನ್ನು ಪ್ರೀತಿಸುವ ಗುಣ ಇವು ಅವರನ್ನು ಎತ್ತರಕ್ಕೆ ಬೆಳೆಸಿವೆ, ಸಮಾಜ ಗೌರವಿಸುವಂತೆ ಮಾಡಿದೆ" ಎಂದು ಬಿ.ಪಿ. ಪ್ರದೀಪ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ಮಾತನಾಡಿ, "ಬದಲಾದ ಭಾರತದಲ್ಲಿ ಬೇಕಾದಷ್ಟು ಅವಕಾಶಗಳಿವೆ. ಪ್ರಾಮಾಣಿಕತೆ, ಸರಳಜೀವನ, ಉದಾತ್ತ ಚಿಂತನೆ, ಆಲೋಚನೆಯಿಂದ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಹಲವು ನಿದರ್ಶನಗಳಿವೆ. ಶಿಕ್ಷಣದ ನಂತರ ಉದ್ಯೋಗಕ್ಕಾಗಿ ಅಲೆದಾಡುವ ಬದಲಿಗೆ ಉದ್ಯಮಿಯಾಗಿ ನೀವೇ ಹತ್ತಾರು ಜನರಿಗೆ ಉದ್ಯೋಗ ನೀಡುವಂತಹ ಅವಕಾಶಗಳನ್ನು ಬಳಸಿಕೊಂಡು ಉದ್ಯಮಿಯಾಗಬೇಕು. ಇಂದು ಇಂಜಿನಿಯರಿಂಗ್ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ ಅದರಂತೆ ಜಾಗತಿಕ ಮಟ್ಟದಲ್ಲೂ ಅವಕಾಶಗಳು ಹೇರಳವಾಗಿದೆ" ಎಂದರು.

ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್. ಪಾಟೀಲ್ "ಕನಸನ್ನು ಕಾಣಿ, ಅನಂತರ ನಿದ್ರೆಮಾಡದೆ ಕಂಡ ಕನಸು ಕಾರ್ಯರೂಪಕ್ಕೆ ಬರುವವರೆಗೂ ಶ್ರಮಪಟ್ಟು ಕೆಲಸಮಾಡಿದರೆ ಯಾವ ಸಾಧನೆಯನ್ನಾದರೂ ಮಾಡಿ, ಎತ್ತರಕ್ಕೆ ಬೆಳೆಯಬಹುದು. ಬೇರೆಯವರಿಗಿಂತ ನಮ್ಮ ಶಕ್ತಿಯ ಬಗ್ಗೆ ನಮಗೆ ಅರಿವಿರಬೇಕು. ಜೊತೆಗೆ ಆತ್ಮವಿಶ್ವಾಸವಿದ್ದರೆ ಯಶಸ್ಸಿನ ದಾರಿ ತಾನಾಗಿಯೇ ತೆರೆದುಕೊಳ್ಳುತ್ತದೆ" ಎಂದರು. ಪಿ.ಜಿ. ವಿದ್ಯಾರ್ಥಿಗಳಾದ ಅಶ್ವಿನ್, ದೀಪಾ ಐಸಿರಿ, ದೇವರಾಜ್, ಶೈಲಜಾ ಮತ್ತು ಅಂಕಿತ ತಮ್ಮ ಕಾಲೇಜಿನ ಅನುಭವ ಮತ್ತು ಅಧ್ಯಾಪಕರೊಂದಿಗೆ ಕಳೆದ ಅಮೂಲ್ಯ ಕ್ಷಣಗಳನ್ನು ಸ್ಮರಿಸಿಕೊಂಡರು.

ಒಟ್ಟು 43 ವಿದ್ಯಾರ್ಥಿಗಳಿಗೆ ಇಂಜನಿಯರಿಂಗ್‌ನಲ್ಲಿ ಪಿ.ಜಿ. ಪದವಿ ಪ್ರಧಾನ ಮಾಡಲಾಯಿತು. ಪ್ರಾಂಶುಪಾಲ ಪ್ರೊ. ನರೇಂದ್ರ ವಿಶ್ವನಾಥ್, ಉಪಪ್ರಾಂಶುಪಾಲ ಚಂದ್ರಶೇಖರ್, ಕಾಲೇಜಿನ ಬೋಧಕ ಸಿಬ್ಬಂದಿ ಹಲವು ಪೋಷಕರು, ವಿದ್ಯಾರ್ಥಿಗಳು ಸಮಾರಂಭಕ್ಕೆ ಸಾಕ್ಷಿಯಾದರು.

■ ವರದಿ: ಎನ್. ಆನಂದ




**"ಇಂಜಿನಿಯರಿಂಗ್, ಮೆಡಿಕಲ್ ಮತ್ತು ನರ್ಸಿಂಗ್, ಪ್ಯಾರಾ-ಮೆಡಿಕಲ್ ಕೋರ್ಸ್‌ಗಳನ್ನು ಪ್ರಾರಂಭಿಸುವುದರ ಮೂಲಕ ಶಿಕ್ಷಣರಂಗಕ್ಕೆ ಡಾ. ಎಂ.ಆರ್. ಹುಲಿನಾಯ್ಕರ್ ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ಶಿಕ್ಷಣ ಸಂಸ್ಥೆಗಳನ್ನು ಹೇಗೆ ಮಾದರಿಯಾಗಿ ಕಟ್ಟಬಹುದು ಮತ್ತು ಅವುಗಳನ್ನು ಹೇಗೆ ಅಚ್ಚುಕಟ್ಟಾಗಿ, ಪರಿಣಾಮಕಾರಿಯಾಗಿ ನಡೆಸಬಹುದು ಎಂಬುದಕ್ಕೂ ಅವರು ಮಾದರಿಯಾಗಿದ್ದಾರೆ. ಮುನ್ನೋಟ ಮತ್ತು ಜನಬೆಂಬಲ ಮತ್ತು ಕುಟುಂಬದ ಸಹಕಾರ, ದೇವರಕೃಪೆ, ಮತ್ತು ಜನಸಂಪರ್ಕ, ಎಲ್ಲರನ್ನು ಪ್ರೀತಿಸುವ ಗುಣ ಅವರನ್ನು ಎತ್ತರಕ್ಕೆ ಕರೆದೊಯ್ದು, ಸಮಾಜ ಗೌರವಿಸುವಂತೆ ಮಾಡಿದೆ. ಪಡೆದದ್ದಕ್ಕಿಂತ ಹೆಚ್ಚಿನದನ್ನು ಸಮಾಜಕ್ಕೆ ಕೊಟ್ಟ ಸಮಾಧಾನ, ತೃಪ್ತಿ ಮತ್ತು ವಿನೀತಭಾವ ಇವು ಅವರ ವ್ಯಕ್ತಿತ್ವಕ್ಕೆ ಹೊಸ ಗರಿ ತೊಡಿಸಿದೆ.**

**ಬಿ.ಪಿ. ಪ್ರದೀಪ್,**
**ಯುವ ಉದ್ಯಮಿ**

# ಉತ್ತಮ ಆರೋಗ್ಯ ಸೇವೆ ದೇಶದ ಬೆನ್ನೆಲುಬು

**▶▶ ಮೊದಲನೇ ಪುಟದಿಂದ**

ಮುಂದಿನ ತಲೆಮಾರಿನ ಭವಿಷ್ಯ ಮತ್ತು ಆರೋಗ್ಯ ಕಾಪಾಡುವಲ್ಲಿ ವೈದ್ಯರ ಪಾತ್ರ ಮಹತ್ತರವಾಗಿದೆ. ವೈದ್ಯಕೀಯ ಲೋಕದಲ್ಲಿ ಕಲಿಕೆ ಎಂಬುದು ನಿರಂತರ ಮತ್ತು ವೃತ್ತಿಯಲ್ಲಿ ಹೆಸರು ಮಾಡಿ ಸೇವೆ ಮಾಡಲು ಕೌಶಲ ಬಹಳ ಮುಖ್ಯವಾಗಿದೆ. ಉತ್ತಮ ವೈದ್ಯರನ್ನು ತಯಾರು ಮಾಡುವಲ್ಲಿ ಶ್ರೀದೇವಿ ವೈದ್ಯಕೀಯ ಕಾಲೇಜು ಮಹತ್ತರ ಕೊಡುಗೆ ನೀಡುತ್ತಿದೆ. ಸತತ ಪರಿಶ್ರಮದಿಂದ ಮನುಷ್ಯ ಎಷ್ಟು ಎತ್ತರಕ್ಕೆ ಹೋಗಬಹುದು ಮತ್ತು ಆದರ್ಶ ವ್ಯಕ್ತಿಯಾಗಿ ಬಾಳಬಹುದು ಎಂಬುದಕ್ಕೆ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ, ಜಾನ್ ಸ್ಟೀಫನ್ ಮತ್ತು ಹೆಲನ್ ಕೆಲರ್ ಅವರುಗಳು ಸಮಾಜಕ್ಕೆ ಕೊಟ್ಟ ಕೊಡುಗೆ ಉದಾಹರಣೆಯಾಗಿದೆ" ಎಂದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ಮಾತನಾಡಿ, "ಶಿಕ್ಷಣ, ತಂತ್ರಜ್ಞಾನ, ಆರ್ಥಿಕ ವಲಯಗಳಲ್ಲಿ ದೇಶ ಅಸಾಧಾರಣ ಸಾಧನೆ ಮಾಡಿದ್ದರೂ, ಗ್ರಾಮೀಣ ಭಾಗದಲ್ಲಿ ಉತ್ತಮ ಆರೋಗ್ಯ ಸೇವೆ ಕಲ್ಪಿಸುವ ನಿಟ್ಟಿನಲ್ಲಿ ನಿರೀಕ್ಷಿತ ಗುರಿ ಸಾಧಿಸಲಾಗಿಲ್ಲ. ಈ ನಿಟ್ಟಿನಲ್ಲಿ ವೃತ್ತಿಗೆ ಕಾಲಿಡುತ್ತಿರುವ ವೈದ್ಯರು ಗಮನ ಹರಿಸಬೇಕಾಗಿದೆ. ಉತ್ತಮ ಶೈಕ್ಷಣಿಕ ವಾತಾವರಣದ ಕಾರಣದಿಂದಾಗಿ ಶ್ರೀದೇವಿ ಕಾಲೇಜಿನಲ್ಲಿ ವರ್ಷದಿಂದ ವರ್ಷಕ್ಕೆ ವೈದ್ಯಕೀಯ ವಿದ್ಯಾರ್ಥಿಗಳ ಪ್ರವೇಶ ಹೆಚ್ಚಾಗುತ್ತಿದೆ. ಇದಕ್ಕೆ ಕಾಲೇಜಿನ ಬೋಧಕ ವರ್ಗ ಕಾರಣವಾಗಿದೆ" ಎಂದು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಲೇಜಿನ ವೈದ್ಯಕೀಯ ನಿರ್ದೇಶಕ ಡಾ. ರಮಣ್ ಎಂ ಹುಲಿನಾಯ್ಕರ್ ಪಿಜಿ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿ, "1992ರಲ್ಲಿ ಪ್ರಾರಂಭವಾದ ಶ್ರೀದೇವಿ




ಶಿಕ್ಷಣ ಸಂಸ್ಥೆಗಳ ಪ್ರಯಾಣ ನಿರಂತರವಾಗಿ ಮುಂದುವರಿಯುತ್ತಿದೆ. ಪ್ರಾರಂಭದಲ್ಲಿ ನರ್ಸಿಂಗ್ ಕಾಲೇಜು, ಮತ್ತು ಫಿಜಿಯೋಥೆರಪಿ, ಫಾರ್ಮಸಿ ಕಾಲೇಜುಗಳನ್ನು ಆರಂಭಿಸಲಾಯಿತು. 2002ರಲ್ಲಿ ಇಂಜಿನಿಯರಿಂಗ್ ಕಾಲೇಜು, ಮತ್ತು 2012ರಲ್ಲಿ ಮೆಡಿಕಲ್ ಕಾಲೇಜು ಆರಂಭಿಸಲಾಯಿತು. ಶ್ರೀದೇವಿ ಕ್ಯಾಂಪಸ್ಸಿನಲ್ಲಿ ಎಲ್.ಕೆ.ಜಿ.ಯಿಂದ ಎಂ.ಬಿ.ಎ, ಇಂಜಿನಿಯರಿಂಗ್ ಮತ್ತು ಎಂಬಿಬಿಎಸ್‌ವರೆಗೆ ಹಲವು ಕೋರ್ಸ್‌ಗಳನ್ನು ಆರಂಭಿಸಲಾಗಿದೆ, ಕ್ಯಾಂಪಸ್‌ನಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಮಕ್ಕಳು ಕಲಿಯುತ್ತಿದ್ದಾರೆ. ಎರಡು ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. 2012ರಲ್ಲಿ ಮೆಡಿಕಲ್ ಕಾಲೇಜು ಆರಂಭವಾಗಿ 2018ರಲ್ಲಿ ಮೊದಲ ಬ್ಯಾಚ್ ವೈದ್ಯಕೀಯ ವಿದ್ಯಾರ್ಥಿಗಳು ಹೊರಬಂದಿದ್ದು, ಸಾವಿರಾರು ವಿದ್ಯಾರ್ಥಿಗಳು ವೈದ್ಯರಾಗಿ ದೇಶದ ಅನೇಕ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಮತ್ತು ವಿದೇಶದಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ಬದಲಾದ ಸನ್ನಿವೇಶ ಮತ್ತು ಜನರ ಅಪೇಕ್ಷೆಗೆ ತಕ್ಕಂತೆ ಆಸ್ಪತ್ರೆಯನ್ನು ಇನ್ನೂ ಮೇಲ್ದರ್ಜೆಗೆ ಏರಿಸಲಾಗುತ್ತಿದೆ. ಸಾವಿರದ ಇನ್ನೂರು ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯಲ್ಲಿ ಸದ್ಯ ನೂರು ಐಸಿಯು ಬೆಡ್ ಸೌಲಭ್ಯವಿದೆ. ಎರಡು ಕ್ಯಾಥ್ ಲ್ಯಾಬ್‌ಗಳಿವೆ. ಅಂಕಾಲಜಿ ಮತ್ತು ಕಿಡ್ನಿ ಟ್ರಾನ್ಸ್‌ಪ್ಲಾಂಟ್ ವಿಭಾಗವನ್ನೂ ಆರಂಭಿಸಲಾಗಿದೆ" ಎನ್ನುತ್ತಾ ಶ್ರೀದೇವಿ ಶಿಕ್ಷಣ ಸಂಸ್ಥೆ ಹಂತ, ಹಂತವಾಗಿ ಬೆಳೆದು ಬಂದ ದಾರಿಯನ್ನು ವಿವರಿಸಿದರು.

ಇದೇ ಸಂದರ್ಭದಲ್ಲಿ 33 ಪಿ.ಜಿ. ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ನೀಡಿ ಗೌರವಿಸಲಾಯಿತು. ಪೋಷಕರು ಮತ್ತು ಹೊರಹೋಗುತ್ತಿರುವ ವಿದ್ಯಾರ್ಥಿಗಳು ಕಾಲೇಜು ಅಂಗಳದಲ್ಲಿ ಕಳೆದ ಅನುಭವವನ್ನು ಮೆಲುಕು ಹಾಕಿದರು. ಕೆಲವರಂತೂ ಇದು ನಮಗೆ ಕಾಲೇಜು ಆಗಿರಲಿಲ್ಲ ಮನೆಯೇ ಆಗಿತ್ತು, ನಮಗೆ ಇದರೊಂದಿಗೆ ಭಾವನಾತ್ಮಕ ಸಂಬಂಧವು ಬೆಸೆದಿತ್ತು. ಈಗ ಬಿಟ್ಟು ಹೋಗುತ್ತಿರುವುದು ಕಷ್ಟವಾಗುತ್ತಿದೆ ಎಂಬ ದುಗುಡ, ಕಳವಳ ವ್ಯಕ್ತಪಡಿಸಿದರು. ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್ ಪಾಟೀಲ್, ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಹರೇಂದ್ರ ಕುಮಾರ್, ಶ್ರೀದೇವಿ ಚಾರಿಟೇಬಲ್ ಟ್ರಸ್ಟಿಗಳಾದ ಡಾ. ಲಾವಣ್ಯ, ಅಂಬಿಕಾ ಹುಲಿನಾಯ್ಕರ್, ಹಾಗೂ ಉಪಪ್ರಾಂಶುಪಾಲೆ ಡಾ. ರೇಖಾಗುರುಮೂರ್ತಿ ಹಾಜರಿದ್ದರು.

**ಪದವಿ ಪಡೆದ ವೈದ್ಯ ವಿದ್ಯಾರ್ಥಿಗಳ ಪಟ್ಟಿ:**

- **ಎಂ. ಡಿ. ಅನೆಸ್ತೇಷಿಯಾ** – ಡಾ. ಅಮೂಲ್ಯ. ಆರ್. ರಾವ್, ಡಾ. ಲುಬ್ನ ನಾಜ್ ಸಮಿವುಲ್ಲ, ಬಿ. ನಿತೀಶ, ಸೈದಾಸಾನಿಯಾ.
- **ಎಂ.ಡಿ. ಡರ್ಮಾಟಾಲಜಿ** – ಡಾ. ಅಶ್ವಿನಿ ಯು. ಎನ್.
- **ಎಂ.ಡಿ. ಎಮರ್ಜೆನ್ಸಿ ಮೆಡಿಸನ್** – ಡಾ. ತೃಪ್ತಿ. ಎನ್ .ಎಸ್.
- **ಎಂ.ಎಸ್. ಇ.ಎನ್ ಟಿ** – ಡಾ.ಅರ್ಚನಾ ಎಂ.ಪಿ. ಡಾ. ಸ್ವೀತ ಜೆಂಗಲ
- **ಎಂ. ಡಿ ಮೆಡಿಸನ್** – ಡಾ.ದಿವ್ಯಾ. ಎನ್, ಡಾ.ನವೀನ್ ಎಸ್. ಪಾಟೀಲ್, ಡಾ.ಶೇಖರ್ ಜವಾಲ್ಗೆ
- **ಎಂಎಸ್ ಒಬಿಸ್ಟಿಕ್ಸ್ ಅಂಡ್ ಗೈನಕಾಲಜಿ** – ಡಾ.ನಿಖಿತಾ ಲೈಶ್ರಾಮ್, ಡಾ.ಸಂಜನ ಶೇಖರ್, ಡಾ.ರಾಕೇಶ್ ಅಂತರತಣಿ
- **ಎಂ .ಎಸ್ ಆಪ್ತಮಾಲಜಿ** – ಡಾ. ಕೃತಿ ಟಿ.ಕೆ., ಡಾ.ಪೂಜಾ ಜೆ.ಪಿ., ಡಾ.ವೆಗ್ಗಲಂ ಚಂದನ,
- **ಎಂ. ಎಸ್ ಅರ್ಥೋಪೆಡಿಕ್ಸ್** – ಡಾ.ಅನುರಾಗ್ ಶರ್ಮಾ, ಡಾ.ಅತುಲ್‌ಕಾಂತ್ ಚೌಧರಿ, ಡಾ. ಹೆಚ್. ರಾಘವೇಂದ್ರ.
- **ಎಂ. ಡಿ ಪೀಡಿಯಾಟ್ರಿಕ್ಸ್** – ಡಾ.ನಿಕ್ಕಾಂತಿ ಚೈತನ್ಯ ಭಾರತಿ, ಡಾ. ಶ್ಯಾಮ್‌ಪ್ರಸಾದ್ ಎಸ್. ಡಾ.ಟೆಲ್ಲಪಲಿ ರಾಜೀವ್ ಗಾಂಧಿ.
- **ಎಂ.ಡಿ. ಸೈಕಿಯಾಟ್ರಿ** – ಡಾ.ಅಕ್ಷಯ್ ಈಶ್ವರ್, ಡಾ.ಮೊನಿಕಾ ವಿ. ಡೊಲ್ಲಿ.
- **ಎಂ.ಡಿ ರೆಡಿಯೋ ಡಯಗ್ನಾಸಿಸ್** – ಡಾ.ಆಶಾಲತಾ. ಹೆಚ್. ಆರ್. ಡಾ. ಅನುಷಾ ಪಲಪರ್ತಿ, ಡಾ.ಮೊಹದ್ ಅಯೂಬ್‌ಖಾನ್.
- **ಎಂ ಡಿ. ರೆಸ್ಪಿರೇಟರಿ ಮೆಡಿಸನ್** – ಡಾ.ದಾವಲ್ ನರೇಂದ್ರ ಮೋದಿ
- **ಎಂ ಎಸ್. ಸರ್ಜರಿ** – ಡಾ.ಹರ್ಷಾ ತಿಲಕ್, ಹೆಚ್.ಎನ್, ಡಾ.ಶ್ರೀಕಾಂತ್ ಮದುಕರ್ ಕಲುಸೆ, ಡಾ. ಸುಮೇದ್ ಆರ್, ಡಾ.ಎ. ಎಂ. ವಿಘ್ನೇಶ್.

# ಶ್ರೀದೇವಿ ನರ್ಸಿಂಗ್ ಕಾಲೇಜಿನಲ್ಲಿ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ

“ಇತ್ತೀಚಿನ ದಿನಗಳಲ್ಲಿ ತಾಯಿ ಮತ್ತು ನವಜಾತ ಶಿಶುವಿನ ಮರಣ ಪ್ರಮಾಣವನ್ನು ಕಡಿಮೆ ಮಾಡುವ ಮಹತ್ವದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (Sustainable Development Goals) ತಜ್ಞರು ನೀಡಿದ್ದಾರೆ. ನಮ್ಮ ಜಿಲ್ಲೆಯ ಸೂಲಗಿತ್ತಿ ನರಸಮ್ಮರವರು ಸುಮಾರು ಎರಡು ಸಾವಿರಕ್ಕೂ ಹೆಚ್ಚು ನಾರ್ಮಲ್ ಡೆಲವರಿ ಮಾಡಿದ್ದಾರೆ. ಸ್ಕಿಲ್‌ಲ್ಯಾಬ್ ಮತ್ತು ಸಿಮ್ಯುಲೇಷನ್ ಲ್ಯಾಬ್‌ಗಳ ಮಹತ್ವವನ್ನು ವೈದ್ಯಕೀಯ ಕ್ಷೇತ್ರದಲ್ಲಿರುವ ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಈ ಸಮ್ಮೇಳನದಲ್ಲಿ ಭಾರತದ ವಿವಿಧ ರಾಜ್ಯಗಳಿಂದ ಇಲ್ಲಿಗೆ ಆಗಮಿಸಿರುವ 400 ಕ್ಕೂ ಹೆಚ್ಚು ಸಂಪನ್ಮೂಲ ವ್ಯಕ್ತಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಈ ಸಮ್ಮೇಳನ ಸರ್ವರೀತಿಯಲ್ಲೂ ಯಶಸ್ವಿಯಾಗಿದೆ” ಎಂದು ತುಮಕೂರಿನ ಸರ್ಕಾರಿ ಕಾಲೇಜಿನ ನರ್ಸಿಂಗ್ ಪ್ರಾಂಶುಪಾಲರಾದ ಡಾ. ಪರಮೇಶ್ವರ್‌ರವರು ತಿಳಿಸಿದರು.



ಶ್ರೀದೇವಿ ನರ್ಸಿಂಗ್ ಕಾಲೇಜು, ಶ್ರೀದುರ್ಗಾಂಬಾ ಸ್ಕೂಲ್ ಆಫ್ ನರ್ಸಿಂಗ್ ಹಾಗೂ ಶ್ರೀ ರಮಣ ಮಹರ್ಷಿ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಸಂಯುಕ್ತವಾಗಿ Strengthening Maternal and Child Health Equity – Innovations and Best Practices ಎನ್ನುವ ವಿಷಯವನ್ನು ಕುರಿತು ಅಂತಾರಾಷ್ಟ್ರೀಯ ಸಮ್ಮೇಳನವನ್ನು ನವೆಂಬರ್ 28ರಂದು ಶ್ರೀದೇವಿ ಆಸ್ಪತ್ರೆಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ಹಾಗೂ ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ. ಲಾವಣ್ಯ ರಮಣ ಅವರು “ಇಂತಹ ವಿಚಾರಗೋಷ್ಠಿಗಳು ಕೇವಲ ಮೆಡಿಕಲ್ ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ನರ್ಸಿಂಗ್ ಮತ್ತು ಅಲೈಡ್ ಸೈನ್ಸ್ ವಿದ್ಯಾರ್ಥಿಗಳಿಗೂ ಉಪಯುಕ್ತ. ಸ್ಕಿಲ್ ಪ್ರೋಗ್ರಾಮ್‌ಗಳು ಉನ್ನತ ಮಟ್ಟದ ಶಿಕ್ಷಣ ಹಾಗೂ ಅಧ್ಯಯನ ಪೂರ್ಣಗೊಳಿಸಿದ ನಂತರ ವೃತ್ತಿಯಲ್ಲಿ ಎದುರಾಗುವ ಚಾಲೆಂಜುಗಳನ್ನು ಎದುರಿಸಲು ಉಪಯುಕ್ತವಾಗುತ್ತದೆ” ಎಂದರು.

ಶ್ರೀದೇವಿ ಆಸ್ಪತ್ರೆಯ ಸಿ.ಎ.ಒ. ಪ್ರದೀಪ್ ವೆಗ್ಗಿ ಅವರು “ಈ ಸಮ್ಮೇಳನ ಯಶಸ್ವಿಯಾಗುವುದರ ಹಿಂದೆ ಎಲ್ಲರ ಪರಿಶ್ರಮವಿದೆ. ನಮ್ಮ ಆಸ್ಪತ್ರೆ ಸೂಪರ್ ಸ್ಪೆಷಾಲಿಟಿಯ ಸೌಲಭ್ಯಗಳು ಹೊಂದಿದ್ದು, ಕ್ಲಿಷ್ಟಕರವಾದ ಹೆರಿಗೆಯ ಶಸ್ತ್ರಚಿಕಿತ್ಸೆಗಳನ್ನು ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗಳು ಯಶಸ್ವಿಯಾಗಿ ಮಾಡಿದ್ದಾರೆ. ಇದು ಒಬ್ಬರ ಪ್ರಯತ್ನವಲ್ಲ, ಬದಲಿಗೆ ತಂಡದ ಪ್ರಯತ್ನ. ಈ ಸಮ್ಮೇಳನದಲ್ಲಿ ನೀವು ತುಂಬಾ ಕಲಿಯುತ್ತೀರಿ” ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

■ ವರದಿ: ಶೃತಿ ಬೆಳ್ಳಿಯಾರ್ ಹೆಚ್ ವಿ



**ವಿಶೇಷ ಉಪನ್ಯಾಸ**

## ವಿಶ್ವ ಅಂಗರಚನಾಶಾಸ್ತ್ರ ದಿನ


ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ನವೆಂಬರ್ 29ರಂದು ಶ್ರೀದೇವಿ ಆಸ್ಪತ್ರೆಯ ಸಭಾಂಗಣದಲ್ಲಿ ವಿಶ್ವ ಅಂಗರಚನಾಶಾಸ್ತ್ರ ದಿನದ ಅಂಗವಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪ್ರಾರಂಭದಲ್ಲಿ ಅಂಗರಚನಾಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ಯೋಗೀಶ್. ಡಿ. ಅವರು ವಿದ್ಯಾರ್ಥಿಗಳಿಗೆ ವಿಶ್ವ ಅಂಗರಚನಾಶಾಸ್ತ್ರ ದಿನದ ಮಹತ್ವವನ್ನು ತಿಳಿಸಿ, ವಿದ್ಯಾರ್ಥಿಗಳಲ್ಲಿ ಅಂಗರಚನಾಶಾಸ್ತ್ರದ ಅಧ್ಯಯನದ ಬಗ್ಗೆ ಅರಿವು ಹಾಗೂ ಪ್ರೇರಣೆಯನ್ನು ಮೂಡಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬೆಂಗಳೂರಿನ ಸೆಂಟ್ ಜಾನ್ಸ್ ವೈದ್ಯಕೀಯ ಕಾಲೇಜು, ಇವರು ಅಂಗರಚನಾಶಾಸ್ತ್ರದ ಪ್ರಾಧ್ಯಾಪಕರಾದ ಡಾ. ನಚಿಕೇತ್ ಶಂಕರ್ ಅವರು ತಮ್ಮ ಆಳವಾದ ಮತ್ತು ಹಿರಿದಾದ ಅನುಭವದ ಆಧಾರದ ಮೇಲೆ ವಿಷಯವನ್ನು ಮಂಡಿಸಿದರು. ‘ಅತಿಯಾದ ಹೊರೆಯಿಂದ ತಿಳುವಳಿಕೆಗೆ’ ಎಂಬ ಪರಿಕಲ್ಪನೆಯನ್ನು ವಿವರಿಸುವ ಸಂದರ್ಭದಲ್ಲಿ, ಅಂಗರಚನಾಶಾಸ್ತ್ರವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಹಲವು ಪರಿಣಾಮಕಾರಿ ವಿಧಾನಗಳನ್ನು ಉದಾಹರಣೆಗಳೊಂದಿಗೆ ತಿಳಿಸಿದರು.

ಉಪನ್ಯಾಸ ಸಂವಾದಾತ್ಮಕವಾಗಿದ್ದು, ವಿದ್ಯಾರ್ಥಿಗಳು ಪ್ರಶ್ನೋತ್ತರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಅಂಗರಚನಾಶಾಸ್ತ್ರದ ಪ್ರಮುಖ ಪರಿಕಲ್ಪನೆಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಅನುಸರಿಸಬಹುದಾದ ಕಲಿಕಾ ವಿಧಾನಗಳು, ಮಾದರಿಗಳ ಬಳಕೆ, ದೃಶ್ಯಾಧಾರಿತ ಅಧ್ಯಯನ ಹಾಗೂ ಕ್ರಮಬದ್ಧ ಅಭ್ಯಾಸದ ಅಗತ್ಯವನ್ನು ವೈದ್ಯಕೀಯ ವಿದ್ಯಾರ್ಥಿಗಳಿಗೆ ತಿಳಿಸಲಾಯಿತು.

ಕಾರ್ಯಕ್ರಮದಲ್ಲಿ 2025ನೇ ತಂಡದ ಮೊದಲ ವರ್ಷದ ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳು, ವಿಭಾಗದ ಅಧ್ಯಾಪಕರು, ಪ್ರಾಧ್ಯಾಪಕರು ಹಾಗೂ ಕಾಲೇಜಿನ ಮುಖ್ಯಸ್ಥರು ಭಾಗವಹಿಸಿದ್ದರು.

■ ವರದಿ: ಶೃತಿ ಬೆಳ್ಳಿಯಾರ್ ಹೆಚ್ ವಿ




## ಶ್ರೀದೇವಿ ನರ್ಸಿಂಗ್‌ನಲ್ಲಿ ಅಂತಿಮ ವರ್ಷದ ನರ್ಸಿಂಗ್ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ




“ವೈದ್ಯಕೀಯ ಶಿಕ್ಷಣ ನಿರ್ಮಿಸಿರುವ ಪ್ರಬಲವಾದ ಅಡಿಪಾಯವೆಂದರೆ ಸಮಾಜಸೇವೆಯಲ್ಲಿ ವ್ಯಕ್ತಿ ತನ್ನನ್ನು ತಾನು ತೊಡಗಿಸಿಕೊಳ್ಳುವುದಾಗಿರುತ್ತದೆ. ಶಿಕ್ಷಣ, ನಿಷ್ಠೆ, ಕಠಿಣ ಪರಿಶ್ರಮ ಮತ್ತು ಶಿಕ್ಷಕರ ಮಾರ್ಗದರ್ಶನವು ವಿದ್ಯಾರ್ಥಿಗಳ ಭವಿಷ್ಯಕ್ಕೆ ದಾರಿ ತೋರುತ್ತದೆ” ಎಂದು ಶ್ರೀದೇವಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಆರ್.ಕೆ. ಮುನಿಸ್ವಾಮಿರವರು ಅಭಿಪ್ರಾಯಪಟ್ಟರು.

ಶ್ರೀದೇವಿ ನರ್ಸಿಂಗ್ ಕಾಲೇಜಿನಲ್ಲಿ ಅಂತಿಮ ವರ್ಷದ ಬಿ.ಎಸ್‌ಸಿ. ಜಿ.ಎನ್.ಎಂ. ನರ್ಸಿಂಗ್ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಡಿಸೆಂಬರ್ 3ರಂದು ಹಮ್ಮಿಕೊಳ್ಳಲಾಗಿತ್ತು.

ಇದೇ ಸಂದರ್ಭದಲ್ಲಿ ಶ್ರೀದೇವಿ ಸಮುದಾಯ ಆರೋಗ್ಯ ಕೇಂದ್ರದ ಡಾ. ಪ್ರಕಾಶ್‌ರವರು ಮಾತನಾಡುತ್ತಾ ‘ಪರೀಕ್ಷೆಯ ಫಲಿತಾಂಶವೇ ವಿದ್ಯಾರ್ಥಿಗಳ ಶ್ರಮಕ್ಕೆ ದೊರೆತ ಗೌರವ’ ಎಂದು ಹೇಳುತ್ತಾ, “ನರ್ಸಿಂಗ್ ವೃತ್ತಿ ಸುಲಭವಲ್ಲ, ಸಮಯವನ್ನು ವ್ಯರ್ಥ ಮಾಡದೆ ಗುಣಮಟ್ಟದ ಸೇವೆಯ ಮೂಲಕ ಈ ವೃತ್ತಿಯಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳಿ” ಎಂದರು.

ಮಾನಸಿಕ ಆರೋಗ್ಯ ಕೇಂದ್ರದ ಡಾ. ಟಿ.ಎಸ್. ಭೀಮರಾಜುರವರು “ಪದವಿಯ ಗಳಿಕೆ ವಿದ್ಯಾರ್ಥಿಗಳ ವೃತ್ತಿಜೀವನಕ್ಕೆ ದಾರಿ ಮಾಡಿಕೊಡುತ್ತದೆ. ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದ ಬದ್ಧತೆ, ಸಮಯಪಾಲನೆ, ಸರಳತೆ, ಪ್ರಾಮಾಣಿಕತೆ ಮೊದಲಾದ ಮೌಲ್ಯಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಯಶಸ್ಸನ್ನು ಗಳಿಸಲು ಸಾಧ್ಯ” ಎಂದರು.

ಶ್ರೀದೇವಿ ನರ್ಸಿಂಗ್ ಕಾಲೇಜಿನ ಮಾನಸಿಕ ಆರೋಗ್ಯ ಕೇಂದ್ರ ಡಾ. ಚಿಕ್ಕಹನುಮಂತಯ್ಯ ಅವರು “ಅಪರಿಚಿತರಾಗಿ ಕಾಲೇಜಿಗೆ ಬಂದ ವಿದ್ಯಾರ್ಥಿಗಳು ಸಂಸ್ಥೆಯ ಆತ್ಮೀಯ ಸದಸ್ಯರಾಗಿ ಬೆಳೆದಿದ್ದಾರೆ. ಅದೊಂದು ಹೆಮ್ಮೆ ವಿಷಯ. ನರ್ಸಿಂಗ್ ವೃತ್ತಿಯಲ್ಲಿ ಅಭ್ಯಾಸವೇ ಬಲ. ಪ್ರತಿಯೊಬ್ಬ ರೋಗಿಯೂ ನಮಗೆ ಹೊಸ ಪಾಠ ಕಲಿಸುತ್ತಾನೆ ಎನ್ನುವ ಮನೋಧರ್ಮ ನಮ್ಮಲ್ಲಿರಬೇಕು” ಎಂದರು.

ವಿದ್ಯಾರ್ಥಿಗಳು ಕೂಡ ತಮ್ಮ ಅನುಭವಗಳು ಮತ್ತು ಅಭಿಪ್ರಾಯಗಳನ್ನು ಹಂಚಿಕೊಂಡರು..

■ ವರದಿ: ಶೃತಿ ಬೆಳ್ಳಿಯಾರ್ ಹೆಚ್ ವಿ

# ಮಧುಮೇಹ ತಪಾಸಣಾ ಶಿಬಿರಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ

ವಿಶ್ವ ಮಧುಮೇಹ ದಿನವನ್ನು ಪ್ರತಿ ವರ್ಷ ನವೆಂಬರ್ 14ರಂದು ಆಚರಿಸಲಾಗುತ್ತದೆ. ಇದರ ಬಗ್ಗೆ ಜಾಗೃತಿ ಮೂಡಿಸುವುದು, ತಡೆಗಟ್ಟುವಿಕೆ, ರೋಗನಿದಾನ ಮತ್ತು ಚಿಕಿತ್ಸೆಯ ಮಹತ್ವ ತಿಳಿಸುವುದು ಇದರ ಮುಖ್ಯ ಉದ್ದೇಶ. ಇದನ್ನು ಅಂತಾರಾಷ್ಟ್ರೀಯ ಡಯಾಬಿಟಿಸ್ ಫೆಡರೇಶನ್ (IDF) ಮತ್ತು ವಿಶ್ವ ಆರೋಗ್ಯ ಸಂಸ್ಥೆ (WHO) ಜಂಟಿಯಾಗಿ ಆಯೋಜಿಸುತ್ತಿವೆ.

ಸಕ್ಕರೆ ಕಾಯಿಲೆ ಬಂದುಬಿಟ್ಟಿದೆ. ಇನ್ನು ನನಗೆ ಭವಿಷ್ಯವಿಲ್ಲ, ಆರೋಗ್ಯವಿಲ್ಲ ಎಂದು ಜೀವನ ಪರ್ಯಂತ ಕೊರಗಬೇಕಿಲ್ಲ. ವೈದ್ಯರ ಸಲಹೆಯಂತೆ ನಿಯಮಿತ ವ್ಯಾಯಾಮ, ಜೀವನಶೈಲಿ ಆಹಾರ ಪದ್ಧತಿಯಿಂದ ಆರೋಗ್ಯ ಜೀವನ ನಡೆಸಬಹುದು. ಅದಕ್ಕೆ ತಜ್ಞರು ಹಲವು ಪರಿಹಾರ ಸೂಚಿಸಿದ್ದಾರೆ. ಇದರ ಬಗ್ಗೆ ಜನ ಜಾಗೃತಿ ಮೂಡಿಸಿ, ಸಮುದಾಯ ಆರೋಗ್ಯ ಕಾಪಾಡುವಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ವತಿಯಿಂದ ನವೆಂಬರ್ 25ರಂದು ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ, ಮೆಚ್ಚುಗೆ ವ್ಯಕ್ತವಾಗಿದೆ. ಇದರ ಲಕ್ಷಣ ಜಾಗೃತಿ, ತಡೆಗಟ್ಟುವಿಕೆ, ರೋಗನಿರ್ಣಯ ಮತ್ತು ಚಿಕಿತ್ಸೆಯ ಫಲಶ್ರುತಿ, ಮಹತ್ವ ತಿಳಿಸುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದೆ.




### ಮಧುಮೇಹದಲ್ಲಿ ಮೂರು ವಿಧ:

**ಟೈಪ್–1 ಡಯಾಬಿಟಿಸ್:** ಇದು ದೀರ್ಘಕಾಲದ ಸ್ಥಿತಿಯಾಗಿದ್ದು, ಮೇದೋಜ್ಜೀರಕ ಗ್ರಂಥಿಯಲ್ಲಿನ ವಿಶೇಷ ಕೋಶಗಳು ಕಡಿಮೆ ಅಥವಾ ಇನ್ಸುಲಿನ್ನನ್ನು ಉತ್ಪಾದಿಸುವುದಿಲ್ಲ ಇದಕ್ಕೆ ಆನುವಂಶಿಕ ಮತ್ತು ಪರಿಸರಗಳೆರಡೂ ಕಾರಣವಾಗಿರಬಹುದು.

**ಟೈಪ್–2 ಡಯಾಬಿಟಿಸ್:** ಟೈಪ್–2 ಡಯಾಬಿಟಿಸ್, ವಯಸ್ಕ–ಪ್ರಾರಂಭದ ಮಧುಮೇಹ ಎಂದು ಕರೆಯಲ್ಪಡುತ್ತದೆ, ಇದು ಅತ್ಯಂತ ಸಾಮಾನ್ಯ ವಿಧವಾಗಿದೆ ಮತ್ತು 40 ವರ್ಷಕ್ಕಿಂತ ಮೇಲ್ಪಟ್ಟ ಜನರಲ್ಲಿ ಇದು ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

**ಜೆಸ್ಟೇಶನಲ್ ಡಯಾಬಿಟಿಸ್:** ಇದು ಗರ್ಭಾವಸ್ಥೆಯ ಸಮಯದಲ್ಲಿ ಕಂಡುಬರುತ್ತದೆ. ಇದನ್ನು ಮಗುವಿನ ಜನನದ ನಂತರ ಇದನ್ನು ಪರಿಹರಿಸಬಹುದಾಗಿದೆ.

ಮೇದೋಜ್ಜೀರಕ ಗ್ರಂಥಿ ಸಾಕಷ್ಟು ಪ್ರಮಾಣದಲ್ಲಿ ಇನ್ಸುಲಿನ್ ಉತ್ಪಾದನೆ ಮಾಡದಿದ್ದರೆ, ರಕ್ತದಲ್ಲಿನ ಸಕ್ಕರೆ ಜೀರ್ಣವಾಗದೇ ದೇಹದ ರಕ್ತನಾಳಗಳಲ್ಲಿ ಸಂಗ್ರಹವಾಗಿ ಹಲವು ಸಮಸ್ಯೆಗಳಿಗೆ ಕಾರಣವಾಗುತ್ತದೆ. ಇದರಿಂದ ಇಡೀ ದೇಹದ ರಕ್ತಪರಿಚಲನಾ ವ್ಯವಸ್ಥೆಗೆ ಅಡ್ಡಿಯಾಗಲಿದೆ. ಕೊಬ್ಬಿನ ಆಹಾರ ಹೆಚ್ಚು ಪದಾರ್ಥಗಳನ್ನು ಸೇವಿಸಿದಾಗ, ಅಪಧಮನಿಗಳಲ್ಲಿ ಕೆಟ್ಟ ಕೊಲೆಸ್ಟ್ರಾಲ್ ಪ್ರಮಾಣ ಹೆಚ್ಚಾಗಿ ಹೃದಯ ಸಂಬಂಧಿತ ಕಾಯಿಲೆಗಳಿಗೆ ಮೂಲವಾಗಲಿದೆ.

ತಿಳಿದೋ, ತಿಳಿಯದೆಯೋ ತೊಡಗಿಸಿಕೊಳ್ಳುವ ಅನೇಕ ಕೆಟ್ಟ ಅಭ್ಯಾಸಗಳಿಂದ ಶರೀರ ರಹಸ್ಯವಾಗಿ ರೋಗಗಳ ಉತ್ಪತ್ತಿಯ ಕೇಂದ್ರವಾಗಲಿದೆ. ಬದಲಾದ ಜೀವನಶೈಲಿ ಮತ್ತು ಆಹಾರಪದ್ಧತಿಯಿಂದ ದೇಶದಲ್ಲಿ ಮಧುಮೇಹಿಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಶ್ರೀದೇವಿ ಮಹಾವಿದ್ಯಾಲಯದ ವೈದ್ಯಕೀಯ ವಿಭಾಗದ ಮುಖ್ಯಸ್ಥ ಕೆ. ಎಲ್. ವಿರೂಪಾಕ್ಷ ಅಭಿಪ್ರಾಯಪಟ್ಟಿದ್ದಾರೆ. ವಿಶ್ವ ಮಧುಮೇಹ ದಿನದ ಅಂಗವಾಗಿ ಶ್ರೀದೇವಿ ಕಾಲೇಜು ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಶಿಬಿರದಲ್ಲಿ ಜಿ.ಆರ್.ಬಿ.ಎಸ್, ಕೊಲೆಸ್ಟ್ರಾಲ್, ನರದೌರ್ಬಲ್ಯ, ಕಣ್ಣಿನ ಪರೀಕ್ಷೆ, ಆಹಾರ ಪದ್ಧತಿ, ಥೈರಾಯ್ಡ್ ಪರೀಕ್ಷೆ ಸೇರಿದಂತೆ ಆರು ರೀತಿಯ ಉಚಿತ ಪರೀಕ್ಷೆ ಮಾಡಲಾಗಿದೆ. ತುಮಕೂರು ನಗರ ಮತ್ತು ಸುತ್ತಮುತ್ತಲ ಹಳ್ಳಿಗಳಿಂದ 500ಕ್ಕೂ ಹೆಚ್ಚು ರೋಗಿಗಳು ಶಿಬಿರದ ಪ್ರಯೋಜನ ಪಡೆದುಕೊಂಡಿದ್ದಾರೆ. ಅತಿಯಾದ ಮೂತ್ರ ಹೋಗುವುದು, ಸುಸ್ತಾಗುವುದು, ಬಾಯಾರಿಕೆ ಹೆಚ್ಚಾಗುವುದು, ತೂಕ ಕಡಿಮೆಯಾಗುವುದು. ಅಂಗಾಲಿನಲ್ಲಿ ಉರಿಬರುವುದು, ಕಣ್ಣು ಮತ್ತು ಕಿಡ್ನಿಯ ಸಮಸ್ಯೆಗಳು ಮಧುಮೇಹದ ಪರಿಣಾಮವಾಗಿರುತ್ತವೆ. ಸಾಕಷ್ಟು ದೈಹಿಕ ಶ್ರಮ, ವ್ಯಾಯಾಮ ಇಲ್ಲದಿರುವುದು ಕೂಡ ಮಧುಮೇಹಕ್ಕೆ ಕಾರಣವಾಗಿದೆ. ಭಾರತವು ಜಗತ್ತಿನ ಮಧುಮೇಹದ ರಾಜಧಾನಿಯಾಗಿದ್ದು, ದೇಶದಲ್ಲಿ 10 ಕೋಟಿಗೂ ಹೆಚ್ಚು ಮಧುಮೇಹಿ ರೋಗಿಗಳಿದ್ದಾರೆ. ಈ ಪರಿಸ್ಥಿತಿ ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಚೀನಾ, ಇಂಡೋನೇಷ್ಯಾ ಸೇರಿದಂತೆ ಜಗತ್ತಿನ ಬೇರೆ ದೇಶಗಳಲ್ಲೂ ಇದು ಹೆಚ್ಚಾಗುತ್ತಿರುವುದಕ್ಕೆ ಒತ್ತಡ ಶೈಲಿಯ ಜೀವನ ಪ್ರಮುಖ ಕಾರಣ.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಉಚಿತ ತಪಾಸಣಾ ಶಿಬಿರಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಬೇರೆಕಡೆ ಹೋಗಿದ್ದರೆ ಇಂತಹ ತಪಸಣಾ ಪರೀಕ್ಷೆಗಳಿಗೆ ಸಾವಿರಾರು ರೂಪಾಯಿ ವೆಚ್ಚ ಮಾಡಬೇಕಾಗುತ್ತದೆ. ಶ್ರಿದೇವಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಇದನ್ನು ಉಚಿತವಾಗಿ ಮಾಡಿರುವುದರಿಂದ ಜನಸಾಮಾನ್ಯರಿಗೆ ಅದರಲ್ಲಿಯೂ ಬಡವರಿಗೆ ಹೆಚ್ಚು ಪ್ರಯೋಜನವಾಗಿದೆ.

ಶ್ರೀದೇವಿ ಚಾರಿಟಬಲ್ ಟ್ರಸ್ಟಿ ಹಾಗೂ ನೇತ್ರತಜ್ಞೆ ಡಾ. ಲಾವಣ್ಯ ರಮಣ, ವೈದ್ಯಕೀಯ ಅಧೀಕ್ಷಕರಾದ ಡಾ. ಮೋಹನ್ ಕುಮಾರ್, ಸಿಇಒ ಪ್ರದೀಪ್ ವೇಗಿ ಉಪ–ವೈದ್ಯಕೀಯ ಅಧೀಕ್ಷಕ ಡಾ. ಚನ್ನಮಲ್ಲಯ್ಯ, ಮಧುಮೇಹತಜ್ಞ ಡಾ. ನವೀನ್ ವೈದ್ಯಕೀಯ ಶುಶ್ರೂಷಕ ನರಸಪ್ಪ ಹಾಗೂ ವಿವಿಧ ವಿಭಾಗದ ವೈದ್ಯಕೀಯ ಸಿಬ್ಬಂದಿ ಶಿಬಿರದಲ್ಲಿ ಭಾಗಿಯಾಗಿದ್ದರು.

▪ ವರದಿ: ಕೆ.ಎಸ್. ರಾಜಮನ್ನಾರ್

# ರಾಜ್ಯೋತ್ಸವದ ಅಂಗವಾಗಿ ಕನ್ನಡಭಾಷೆಯ ಅಭಿವೃದ್ಧಿಗೆ ಶ್ರೀದೇವಿ ಶಿಕ್ಷಣ ಸಂಸ್ಥೆಯಿಂದ ವಿನೂತನ ಕೊಡುಗೆ

ಚಾಟ್ ಜಿಪಿಟಿಯಂತಹ ಎಐ ಟೂಲನ್ನು ಕನ್ನಡದಲ್ಲಿ ಒದಗಿಸುವ ವ್ಯವಸ್ಥೆ ಅಭಿವೃದ್ಧಿ ಪಡಿಸುವ 'ಪ್ರಜ್ಞಾ ಎಐ' ಯೋಜನೆಗೆ ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯ ಮುಂದಾಗಿದೆ. 48 ಜಿಬಿ ಸಾಮರ್ಥ್ಯ ಎನ್ವಿಡಿಯಾ ಆರ್‌ಟಿಕ್ಸ್ 6000 ಎಡಿಎ ಜನರೇಷನ್ ಗಣಕ ಸಮೂಹ ವ್ಯವಸ್ಥೆಯ ಕಾರ್ಯಾರಂಭಕ್ಕೆ ಶ್ರೀದೇವಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಚಾಲನೆ ನೀಡಿದ್ದಾರೆ.



'ಇದು ಕನ್ನಡ ಗಣಕ ಪ್ರತಿಷ್ಠಾನ ಬೆಂಗಳೂರು ಮತ್ತು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಕೈಗೊಂಡಿರುವ ಮಹತ್ತ್ವದ ಯೋಜನೆಯಾಗಿದೆ. ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಅಲ್ಲಿನ ಪ್ರಾಧ್ಯಾಪಕರ ಮಾರ್ಗದರ್ಶನದೊಂದಿಗೆ ಇದನ್ನು ರೂಪಿಸಲಿದ್ದು ಇದು ಕನ್ನಡಕ್ಕೆ ಚಾಟ್ ಜಿಪಿಟಿಯಂತಹ ಸೌಲಭ್ಯವನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ' ಎಂದು ಡಾ. ಹುಲಿನಾಯ್ಕರ್ ವಿವರಿಸಿದ್ದಾರೆ. ಮುಂದುವರಿದು ಶ್ರೀಯುತರು "ಇದನ್ನು ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಪ್ರಾರಂಭಿಸಿರುವುದು ಸಂತಸದ ಸಂಗತಿಯಾಗಿದೆ. ಬರುವ ಯುಗಾದಿಯ ವೇಳೆಗೆ ಪ್ರಜ್ಞಾ ಎಐ ವ್ಯವಸ್ಥೆಯ ಮೊದಲ ಆವೃತ್ತಿಯು ಜಗತ್ತಿನ ಎಲ್ಲಾ ಕನ್ನಡಿಗರಿಗೂ ದೊರೆಯಲಿದೆ. ಕನ್ನಡ ಕೇಂದ್ರೀಕೃತವಾದ ಇಂತಹ ವ್ಯವಸ್ಥೆ ಭಾರತದಲ್ಲಿ ಮೊದಲ ಬಾರಿಗೆ ನಡೆದಿದ್ದು, ಇದು ಸಮಸ್ತ ಕನ್ನಡಿಗರಿಗೆಲ್ಲ ಅತ್ಯಂತ ಹೆಮ್ಮೆ ವಿಷಯ" ಎಂದರು.

ಕನ್ನಡ ಗಣಕ ಪ್ರತಿಷ್ಠಾನದ ಕಾರ್ಯದರ್ಶಿ ಜಿ.ಎನ್. ನರಸಿಂಹಮೂರ್ತಿ ಮಾತನಾಡಿ, "ಕನ್ನಡ ಭಾಷೆಗೆ ತನ್ನದೇ ಆದ ವಿಶೇಷ ಮಹತ್ತ್ವವಿದೆ. ಸಾಹಿತ್ಯ, ಸಂಸ್ಕೃತಿ, ಶಿಲ್ಪಕಲೆ ಮೊದಲಾದ ಜ್ಞಾನದ ಎಲ್ಲಾ ವಿಷಯಗಳು ವಿಶ್ವಕೋಶದ ರೂಪದಲ್ಲಿ ಪ್ರಜ್ಞಾ ಎಐನಲ್ಲಿ ಸಿಗಬೇಕು. ಶ್ರೀದೇವಿ ಶಿಕ್ಷಣ ಸಂಸ್ಥೆ ಮಾಡುತ್ತಿರುವ ಈ ಕೆಲಸದಿಂದ ಸರಕಾರಕ್ಕೆ, ಕನ್ನಡಿಗರಿಗೆ, ವಿಶೇಷವಾಗಿ ಸಂಶೋಧನಾ ವಿದ್ಯಾರ್ಥಿಗಳಿಗೆ ಬಹಳ ಉಪಯೋಗವಾಗುತ್ತದೆ. ಎಲ್ಲರೂ ಒಟ್ಟಾಗಿ ತಂತ್ರಜ್ಞಾನ ಬಳಸಿಕೊಂಡು ಮಾಡುವ ಕನ್ನಡದ ಸೇವೆಯಿದು. ಅದನ್ನು ಮುಂದುವರಿಸಿಕೊಂಡು ಹೋಗುವ ಸಂಕಲ್ಪವನ್ನು ಮಾಡಬೇಕಿದೆ" ಎಂದರು.



ಕಾಲೇಜಿನ ಮೆಡಿಕಲ್ ಡೈರೆಕ್ಟರ್ ಡಾ. ರಮಣ್ ಹುಲಿನಾಯ್ಕರ್, ಶ್ರೀದೇವಿ ಅಂತರಂಗ ಪತ್ರಿಕೆಯ ಗೌರವ ಸಂಪಾದಕರಾದ ಡಾ. ಕೆ.ಆರ್. ಕಮಲೇಶ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್. ಪಾಟೀಲ್, ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ. ನರೇಂದ್ರ ವಿಶ್ವನಾಥ್ ಮತ್ತು ಪ್ರಾಧ್ಯಾಪಕರು ಹಾಗೂ ಈ ಯೋಜನೆಯ ಸಂಯೋಜಕರಾದ ಡಾ. ಗಿರೀಶ್. ಎಲ್, ಬೋಧಕ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಬೆಂಗಳೂರಿನಲ್ಲಿ ಮೂರು ದಿನಗಳ ಟೆಕ್‌ಮೇಳ

# ಆರೋಗ್ಯ ಸೇವಾವಲಯ: ಹೂಡಿಕೆ, ಅವಕಾಶ, ಉದ್ಯೋಗ



■ ಬಿ.ಎಸ್. ವೆಂಕಟೇಶ ಪ್ರಸಾದ್
ಹಿರಿಯ ಪತ್ರಕರ್ತರು




'ಬೆಂಗಳೂರು ಟೆಕ್ ಮೇಳ'ದಲ್ಲಿ ನಡೆದ 'ಭಾರತದಲ್ಲಿ ಭವಿಷ್ಯದ ತಂತ್ರಜ್ಞಾನಗಳು' ಕುರಿತ ಸಂವಾದ ಗೋಷ್ಠಿಯಲ್ಲಿ ಕಿಂಡ್ರಿಲ್ ಇಂಡಿಯಾ ಕಂಪನಿಯ ಅಧ್ಯಕ್ಷ ಲಿಂಗರಾಜ್ ಸಾವಕಾರ್, ರಾಜ್ಯ ಎಲೆಕ್ಟ್ರಾನಿಕ್ಸ್ ಮತ್ತು ಐಟಿ/ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಬಯೊಕಾನ್ ಕಂಪನಿಯ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ, ಉದ್ಯಮಿ ಕ್ರಿಸ್ ಗೋಪಾಲಕೃಷ್ಣ ಮತ್ತು ಸ್ಟಾರ್ಟ್ ಅಪ್ ವಿಷನ್ ಗ್ರೂಪ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್ ಅವರು ಪಾಲ್ಗೊಂಡಿದ್ದರು.

ಆರೋಗ್ಯಸೇವಾ ವಲಯವು ಇತ್ತೀಚಿನ ವರ್ಷಗಳಲ್ಲಿ ಪ್ರಪಂಚದೆಲ್ಲೆಡೆ ಮಹತ್ತ್ವವನ್ನು ಪಡೆದುಕೊಂಡಿದೆ. ಅದರಲ್ಲಿಯೂ, ಕೋವಿಡ್ ನಂತರದಲ್ಲಿ ಇದು ಇನ್ನಷ್ಟು ತೀವ್ರಗೊಂಡಿದೆ. ಈ ಬಗ್ಗೆ ಗಮನಕೇಂದ್ರಿಕರಿಸಿ ಅಧ್ಯಯನಗಳು ಹಾಗೂ ಸಂಶೋಧನೆಗಳು ಹೆಚ್ಚುಹೆಚ್ಚು ನಡೆಯುತ್ತಿವೆ. ಇದಕ್ಕೆ ಪೂರಕವಾಗಿ ಆಧುನಿಕ ತಂತ್ರಜ್ಞಾನವನ್ನು ಆಧರಿಸಿದ ಉಪಕರಣಗಳು ಅಭಿವೃದ್ಧಿಯಾಗುತ್ತಿವೆ. ಜೈವಿಕ ತಂತ್ರಜ್ಞಾನ, ರೊಬೊಟಿಕ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಇತ್ಯಾದಿಗಳು ಆರೋಗ್ಯ ಸೇವೆಯಲ್ಲಿ ಹೊಸ ಪರಿಕಲ್ಪನೆಗಳನ್ನು ಹಾಗೂ ಅಚ್ಚರಿಯ ಬದಲಾವಣೆಗಳನ್ನು ಉಂಟುಮಾಡುತ್ತಿವೆ. ಈ ಕಾರಣಗಳಿಂದಾಗಿ, ಆರೋಗ್ಯ ಸೇವೆಯು ಬಹು ದೊಡ್ಡ ಉದ್ಯಮವಲಯವಾಗಿಯೂ ಬೆಳೆಯುತ್ತಿದೆ. ನಮ್ಮ ಭಾರತ, ಮುಖ್ಯವಾಗಿ ಕರ್ನಾಟಕದಲ್ಲಿ ಇದಕ್ಕೆ ದೊಡ್ಡಮಟ್ಟದ ಅವಕಾಶಗಳಿವೆ. ಸ್ಟಾರ್ಟ್‌ಅಪ್‌ಗಳು ಆರೋಗ್ಯ ಸೇವೆಗೆ ನವೀನತೆಯ ಸ್ಪರ್ಶ ನೀಡುತ್ತಿವೆ. ಅಪಾರ ಹೂಡಿಕೆ ಹರಿದು ಬರುವುದರ ಜೊತೆಗೆ ಸಂಬಂಧಿತ ಉದ್ಯೋಗಗಳಿಗೆ ಬೇಡಿಕೆ ಹೆಚ್ಚುವ ಸಾಧ್ಯತೆಗಳಿವೆ. ಈ ಹಿನ್ನೆಲೆಯಲ್ಲಿ, ಬೆಂಗಳೂರಿನಲ್ಲಿ ಕಳೆದ ನವೆಂಬರ್ 18ರಿಂದ 20ರವರೆಗೆ ಮೂರು ದಿನಗಳ ಕಾಲ ನಡೆದ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಬೆಂಗಳೂರು ಟೆಕ್‌ಮೇಳ'ದಲ್ಲಿ (ಬಿಟಿಎಸ್ 25) 'ಲೈಫ್‌ಸ್ಟೇಜ್' ಎಂಬ ಪ್ರತ್ಯೇಕ ವೇದಿಕೆಯನ್ನು ಸಜ್ಜುಗೊಳಿಸಿ 'ಡಿಜಿಹೆಲ್ತ್ ಮತ್ತು ಬಯೊಟೆಕ್' ವಸ್ತು ವಿಷಯವನ್ನಾಧರಿಸಿ ಚಿಂತನ ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಮೂರು ದಿನಗಳ ಬೆಂಗಳೂರು ಟೆಕ್‌ಮೇಳವು ಐಟಿ. ಬಿಟಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರ ನೇತೃತ್ವದಲ್ಲಿ ಜರುಗಿತ್ತು. ಇದರ ಯಶಸ್ಸಿನ ಫಲವನ್ನು ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳು ಪಡೆದುಕೊಂಡವು.

ಭವಿಷ್ಯದ ಜೈವಿಕ ತಂತ್ರಜ್ಞಾನವನ್ನು (ಬಯೊಟೆಕ್) ರೂಪಿಸುವ ಹೊಸ ತಂತ್ರಜ್ಞಾನಗಳು, ರೋಗಗಳಿಗೆ ನಿರ್ದಿಷ್ಟವಾದ ಔಷಧಿಗಳು ಮತ್ತು ಥೆರಾಪ್ಯೂಟಿಕ್ಸ್, ಬಯೊಟೆಕ್ ಸ್ಟಾರ್ಟ್–ಅಪ್‌ಗಳು ಹಾಗೂ ಫಂಡಿಂಗ್, ಡಯಾಗ್ನೋಸ್ಟಿಕ್ಸ್ ಮತ್ತು ಮೆಡ್‌ಟೆಕ್, ರೀಜೆನರೇಟಿವ್ ಮೆಡಿಸಿನ್ ಅಂಡ್ ಸೆಲ್‌ಥೆರಪಿ, ಬಯೊ ಮ್ಯಾನುಫ್ಯಾಕ್ಚರಿಂಗ್, ಬಯೊಟೆಕ್ ಹಾಗೂ ಆಹಾರದಲ್ಲಿ ನವೀನತೆ, ಪರಿಸರ ಜೈವಿಕ ತಂತ್ರಜ್ಞಾನ ಮತ್ತು ಆರ್ಟಿಫಿಶಿಯಲ್ ಬುದ್ಧಿಮತ್ತೆ ಮತ್ತು ಜೀವಶಾಸ್ತ್ರವನ್ನು (ಎಐ ಅಂಡ್ ಬಯಾಲಜಿ) ಕುರಿತ ಸಂವಾದ ಗೋಷ್ಠಿಗಳಲ್ಲಿ ತಜ್ಞರು ವಿವಿಧ ವಿಷಯಗಳನ್ನು ಕುರಿತು ಬೆಳಕನ್ನು ಚೆಲ್ಲಿದರು. ಬಯೊಕಾನ್ ಕಂಪನಿಯ ಸಂಸ್ಥಾಪಕಿ ಡಾ. ಕಿರಣ್ ಮಜುಂದಾರ್ ಷಾ ಸೇರಿದಂತೆ ಹಲವು ಪರಿಣತರು ಪಾಲ್ಗೊಂಡು ಕ್ಷೇತ್ರದಲ್ಲಿರುವ ಅವಕಾಶಗಳು, ಸವಾಲುಗಳು, ಪರಿಹಾರಗಳು ಇತ್ಯಾದಿಗಳ ಬಗೆಗೆ ಚರ್ಚಿಸಿದರು.

### ಉತ್ಪಾದನ ವಲಯಕ್ಕೂ ವಿಸ್ತರಣೆ

ಅವರು 'ಕೃತಕ ಬುದ್ಧಿಮತ್ತೆ ಮತ್ತು ಜೀವಶಾಸ್ತ್ರ' ಗೋಷ್ಠಿಯಲ್ಲಿ 'ಬಯೋಫೋರ್ಜ್' ಸಂಸ್ಥೆಯ ಸಂಸ್ಥಾಪಕ ಕೀರ್ತಿಪ್ರಸಾದ್ ವೆಂಕಟರಮಣನ್ ಅವರು, ಜೈವಿಕ ತಂತ್ರಜ್ಞಾನವನ್ನು ಆಧರಿಸಿದ ಆರ್ಥಿಕತೆಯು ವ್ಯಾಪಕವಾಗಿ ಅಭಿವೃದ್ಧಿಯಾಗುತ್ತಿರುವ ಬಗೆಗೆ ವಿವರಿಸುವುದರ ಜೊತೆಗೆ ಭಾರತೀಯ ನವೋದ್ಯಮಿಗಳಿಗೆ ಈ ವಲಯದಲ್ಲಿರುವ ವಿಪುಲ ಅವಕಾಶಗಳತ್ತ ಗಮನಸೆಳೆದರು. ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ಮಾತ್ರವಲ್ಲದೆ ಉತ್ಪಾದನ ವಲಯದಲ್ಲಿಯೂ ಮಾರುಕಟ್ಟೆ ವಿಸ್ತರಣೆಯಾಗುತ್ತಿದೆ ಎಂದ ಅವರು, "ಈ ಹಿಂದೆ ಬಾಳೆ ತೋಟದಲ್ಲಿ ಬೆಳೆದ ಬಾಳೆಹಣ್ಣು ಮಾತ್ರ ಮಾರಾಟದ ಬಹುದಾದ ವಸ್ತುವಾಗಿತ್ತು. ಆದರೆ ಈಗ ಬಾಳೆಗಿಡದ ಎಲ್ಲ ಭಾಗಗಳೂ ವಿವಿಧ ಉತ್ಪನ್ನಗಳಿಗೆ ಕಚ್ಚಾ ವಸ್ತುಗಳಾಗಿವೆ. ಪರಿಸರಸ್ನೇಹಿ ಕಾಳಜಿ ಮತ್ತು ಅನಿವಾರ್ಯತೆ ಹೆಚ್ಚುತ್ತಿರುವುದರಿಂದ ಜೈವಿಕ ತಂತ್ರಜ್ಞಾನಕ್ಕೆ ಬೇರೆ ಬೇರೆ ಆಯಾಮದ ಅವಕಾಶಗಳಿವೆ" ಎಂದು ಉದಾಹರಣೆಯೊಂದಿಗೆ ಮನದಟ್ಟು ಮಾಡಿಕೊಟ್ಟರು. ಐಐಎಸ್‌ಸಿ ಜೈವಿಕ–ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಪ್ರೊ. ನಾಗಸುಮಚಂದ್ರ ಅವರು, "ನಾವು ಭವಿಷ್ಯದ ಅಗತ್ಯಗಳಿಗೆ ತಕ್ಕಂತೆ ತಂತ್ರಜ್ಞರನ್ನು ಹಾಗೂ ನವೋದ್ಯಮಿಗಳನ್ನು ರೂಪಿಸಬೇಕಿದ್ದು, ಈ ನಿಟ್ಟಿನಲ್ಲಿ ಶೈಕ್ಷಣಿಕ ವಲಯದಲ್ಲಿ ಸಾಕಷ್ಟು ಸುಧಾರಣೆಗಳಾಗಬೇಕು. ಶಿಕ್ಷಣ ವ್ಯವಸ್ಥೆಯಲ್ಲಿ ಕೇವಲ ಒಂದು ವಿಷಯದಲ್ಲಿ ತಜ್ಞತೆ ಇದ್ದರೆ ಸಾಲದು. ಶುದ್ಧ ವಿಜ್ಞಾನವೂ ಸೇರಿದಂತೆ ಹಲವು ಶಾಖೆಗಳಲ್ಲಿನ ಪರಿಣತಿಯು ಇಂದಿನ ತುರ್ತು ಆವಶ್ಯಕತೆಯಾಗಿದೆ" ಎಂದು ಒತ್ತಿ ಹೇಳಿದರು.

### ಪೇಟೆಂಟ್‌ನ ಪ್ರಾಮುಖ್ಯ

'ಪರಿಸರ ಜೈವಿಕ ತಂತ್ರಜ್ಞಾನ ಮತ್ತು ಜೈವಿಕ ಪರಿಹಾರಗಳು' ಕುರಿತ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ಐಐಟಿ–ಮದ್ರಾಸ್ ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥ ಪ್ರೊಫೆಸರ್ ಸತ್ಯನಾರಾಯಣ ಗುಮ್ಮಾಡಿ ಅವರು, ಭವಿಷ್ಯದಲ್ಲಿ ಉಂಟಾಗುವ ವೃತ್ತಿ ಅವಕಾಶಗಳನ್ನು ಬಳಸಿಕೊಳ್ಳಲು ವಿದ್ಯಾರ್ಥಿಗಳು ಶೈಕ್ಷಣಿಕ ಪಠ್ಯಕ್ರಮದ ಜೊತೆಗೆ ನವೀನತೆ ಹಾಗೂ ಉದ್ಯಮಶೀಲತೆಯ ಮನೋಭಾವ ಅಳವಡಿಸಿಕೊಳ್ಳಬೇಕಾದ ಪ್ರಾಮುಖ್ಯದ ಬಗ್ಗೆ ಪ್ರಸ್ತಾಪಿಸಿದರು. ಐಐಟಿ ಮದ್ರಾಸ್‌ನಲ್ಲಿ 'ದಿನಕ್ಕೊಂದು ಪೇಟೆಂಟ್' ಗುರಿ ಹಾಕಿಕೊಂಡು ಕಳೆದ ವರ್ಷ 380 ಪೇಟೆಂಟ್‌ಗಳನ್ನು ಪಡೆಯಲಾಗಿದೆಯೆಂದು ತಿಳಿಸಿದ ಅವರು ಶೈಕ್ಷಣಿಕ ಸಂಸ್ಥೆಗಳು ನವೀನ ಪರಿಕಲ್ಪನೆಗಳಿಗೆ ಪೇಟೆಂಟ್ ಪಡೆಯಲು ಯತ್ನಿಸಬೇಕು ಎಂಬ ಸಲಹೆ ನೀಡಿದರು. 'ನೊವೊನೆಸಿಸ್' ಸಂಸ್ಥೆಯ ರಾಜಗೋಪಾಲ್ ಮನೋಹರ್ ಅವರು ಸುಸ್ಥಿರ ತಂತ್ರಜ್ಞಾನ ಕ್ಷೇತ್ರದಲ್ಲಿ ಅವಕಾಶಗಳು ಹೆಚ್ಚುತ್ತಿರುವ ಬಗ್ಗೆ ಹೇಳಿದರೆ, 'ಪ್ರಾಜ್ ಇಂಡಸ್ಟ್ರೀಸ್'ನ ಡಾ. ಪಂಕಜ್ ಪಾಟೀಲ್ ಮಾತನಾಡಿ, ಜಾಗತಿಕ ಸವಾಲುಗಳಿಗೆ ಪರಿಹಾರ ಒದಗಿಸಿಕೊಡಲು ಭಾರತ ಸಮರ್ಥವಾಗಿದೆ ಎಂದರು.

### ಎ.ಐ.ನಿಂದ ದತ್ತಾಂಶ ವರ್ಗೀಕರಣ

ಕೋವಿಡ್ ನಂತರದಲ್ಲಿ ಜಗತ್ತಿನ ವಿಜ್ಞಾನ ಮತ್ತು ತಂತ್ರಜ್ಞಾನ ವಲಯದಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಯಾವ ರೀತಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂಬ ಬಗ್ಗೆ ಕ್ರಿಸ್ಪರ್‌ಬಿಟ್ಸ್ ಸಂಸ್ಥೆಯ ಮುಖ್ಯ ವೈಜ್ಞಾನಿಕ ಅಧಿಕಾರಿ ಡಾ. ವೈಜಯಂತಿ ಗುಪ್ತಾ ವಿವರಿಸಿದರು. 'ವಿಜ್ಞಾನ ಮತ್ತು ಎಂಜಿನಿಯರಿಂಗ್ ವಲಯದಲ್ಲಿನ ಪರಿವರ್ತನೆಗಾಗಿ ಎಐ' ಗೋಷ್ಠಿಯಲ್ಲಿ ಮಾತನಾಡಿ, "ಕಳೆದ ಕೆಲವು ವರ್ಷಗಳಿಂದೀಚೆಗೆ ಎಲ್ಲ ವಲಯಗಳಲ್ಲಿ ಹೇರಳ ದತ್ತಾಂಶ ಬರುತ್ತಿದೆ. ಅವುಗಳನ್ನು ವರ್ಗೀಕರಿಸಿ, ನಿರ್ದಿಷ್ಟ ದತ್ತಾಂಶ ಹುಡುಕಿ ಕೊಡುವಲ್ಲಿ ಎಐ ಪಾತ್ರ ಗಮನಾರ್ಹವಾಗಿದೆ" ಎಂದರು. ದೇಶೀಯ ಸ್ಟಾರ್ಟ್‌ಅಪ್‌ಗಳಿಗೆ ಆದ್ಯತೆ ನೀಡುವುದು ಅವಶ್ಯ ಎಂದು. 'ಭಾರತದಲ್ಲಿ ಜೈವಿಕ ತಂತ್ರಜ್ಞಾನ ಮತ್ತು ಆರೋಗ್ಯ ತಂತ್ರಜ್ಞಾನದ ಅಭಿವೃದ್ಧಿ' ಗೋಷ್ಠಿಯಲ್ಲಿ' ಇನ್ನಾಕ್ಸೆಲ್' ಸಂಸ್ಥೆಯ ಸಂಸ್ಥಾಪಕ ಶ್ರೀರಾಜ್ ಧನಾನಿ ಅಭಿಪ್ರಾಯಪಟ್ಟರು. ದೇಶೀಯ ಸ್ಟಾರ್ಟ್–ಅಪ್‌ಗಳು ಜಾಗತಿಕ ಮಟ್ಟದ ಸ್ಪರ್ಧೆ ಎದುರಿಸಲು ಹಾಗೂ ಅತ್ಯುನ್ನತ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಲು ಮಾರುಕಟ್ಟೆಯ ಉತ್ತೇಜನ ಅತ್ಯಗತ್ಯ; ಪ್ರಸ್ತುತ ಸರ್ಕಾರದ ಮಟ್ಟದಲ್ಲಿ ಖರೀದಿ ಪ್ರಕ್ರಿಯೆ, ಟೆಂಡರ್‌ಗಳ ವ್ಯವಸ್ಥೆ ಸಂಕೀರ್ಣವಾಗಿದ್ದು, ಇದನ್ನು ಬದಲಾದ ಕಾಲಘಟ್ಟಕ್ಕೆ ಹಾಗೂ ಸ್ಟಾರ್ಟ್–ಅಪ್‌ಗಳ ಅನುಕೂಲಕ್ಕೆ ತಕ್ಕಂತೆ ಬದಲಾಯಿಸುವುದು ಅಗತ್ಯ ಎಂದೂ ಅವರು ಒತ್ತಿ ಹೇಳಿದರು. 'ಸೈಕ್ಲೋಪ್ಸ್ ಮೆಡ್‌ಟೆಕ್' ಸಂಸ್ಥೆಯ ಡಾ. ನಿರಂಜನ್ ಸುಬ್ಬರಾವ್ ವಿಷಯವನ್ನು ಮಂಡಿಸಿ, ಪಾಶ್ಚಾತ್ಯ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಉತ್ಪನ್ನಗಳ ನೋಂದಣಿ ಹಾಗೂ ವಾಣಿಜ್ಯ ಪರವಾನಗಿ ಪಡೆಯುವ ಪ್ರಕ್ರಿಯೆ ತುಂಬಾ ಜಟಿಲ ಹಾಗೂ ದೀರ್ಘಾವಧಿ ಪ್ರಕ್ರಿಯೆಯಾಗಿದೆ; ಈ ವ್ಯವಸ್ಥೆ ಬದಲಾಗಬೇಕು; ವೈದ್ಯಕೀಯ ತಂತ್ರಜ್ಞಾನದಲ್ಲಿ ಕಳೆದ 10 ವರ್ಷಗಳಲ್ಲಿ ವ್ಯಾಪಕ ಬದಲಾವಣೆಗಳಾಗಿವೆ; ಭಾರತದ ಉತ್ಪನ್ನಗಳಿಗೆ ಜಾಗತಿಕ ಮಟ್ಟದಲ್ಲಿ ಶ್ಲಾಘನೆ ವ್ಯಕ್ತವಾಗುತ್ತಿದೆ; ಆದರೆ ಆಂತರಿಕ ಮಾರುಕಟ್ಟೆಯ ವಿಸ್ತರಣೆಯು ಸವಾಲಾಗಿದೆ ಎಂದರು.

> "ಮುಂದಿನ ಹತ್ತು ವರ್ಷಗಳ ಅವಧಿಯು ಕೃತಕ ಬುದ್ಧಿಮತ್ತೆ (ಎಐ), ರೊಬೊಟಿಕ್ಸ್, ಕ್ವಾಂಟಂ ಕಂಪ್ಯೂಟಿಂಗ್ ಹಾಗೂ ಜೈವಿಕ ತಂತ್ರಜ್ಞಾನಗಳ ದಶಕವಾಗಲಿದೆ. ನಮ್ಮ ಕರ್ನಾಟಕ ರಾಜ್ಯವು ಈ ವಲಯಗಳಲ್ಲಿ ಮುಂಚೂಣಿಯಲ್ಲಿರಬೇಕು ಎಂಬುದೇ ರಾಜ್ಯ ಸರ್ಕಾರದ ಆಶಯವಾಗಿದೆ. ಅದನ್ನು ನನಸಾಗಿಸಲು ಬೆಂಗಳೂರು ಟೆಕ್‌ಮೇಳವು ಭರವಸೆಯ ಒಳನೋಟಗಳನ್ನು ಲಭ್ಯವಾಗಿಸಿದೆ.
>
> **ಪ್ರಿಯಾಂಕ್ ಖರ್ಗೆ**
> ಎಲೆಕ್ಟ್ರಾನಿಕ್ಸ್ ಮತ್ತು ಐಟಿ/ಬಿಟಿ ಸಚಿವರು,
> ಕರ್ನಾಟಕ ಸರ್ಕಾರ

### ಮೆಡ್‌ಟೆಕ್ ಬೆಳೆಯಬೇಕು


ನಮ್ಮಲ್ಲಿ ಫಾರ್ಮಾ ಕ್ಷೇತ್ರವು ಬೆಳೆದ ರೀತಿಯಲ್ಲಿ ಡಯಾಗ್ನಾಸ್ಟಿಕ್ಸ್ ಹಾಗೂ ಮೆಡ್‌ಟೆಕ್ ಬೆಳೆದಿಲ್ಲ. ಇದರ ಬಲವರ್ಧನೆಯ ಕಾರ್ಯ ಶೀಘ್ರವಾಗಿ ಆಗಬೇಕು. ಈ ಕ್ಷೇತ್ರದಲ್ಲಿರುವ ಅಂತರಗಳನ್ನು ಗುರುತಿಸಿ ನಿವಾರಿಸಬೇಕಿದೆ ಎಂದು "ಡಯಾಗ್ನಾಸ್ಟಿಕ್ ಮತ್ತು ಮೆಡ್‌ಟೆಕ್ ಕ್ಷೇತ್ರದ ಬೆಳವಣಿಗೆ" ಕುರಿತ ಸಂವಾದದಲ್ಲಿ ಉದ್ಯಮದ ಪ್ರಮುಖರು ಒಕ್ಕೊರಲಿನಿಂದ ಅಭಿಪ್ರಾಯಪಟ್ಟರು. ಬಿಗ್ ಟೆಕ್ ಸಂಸ್ಥೆಯ ಡಾ. ಚಂದ್ರಶೇಖರನ್ ನಾಯರ್, ತಂತ್ರಜ್ಞಾನ ಹೊಸ ಆವಿಷ್ಕಾರವನ್ನು ಉತ್ಪನ್ನವಾಗಿ ಮಾರುಕಟ್ಟೆಗೆ ತರುವುದರಲ್ಲಿ ಸಹಯೋಗ ಹಾಗೂ ಫಂಡಿಂಗ್ ಕೊರತೆಗಳಿಗೆ ಪರಿಹಾರ ಕಂಡುಕೊಳ್ಳುವ ಜರೂರಿದೆ ಎಂದು ನುಡಿದರು. ವೈದ್ಯರೊಂದಿಗೆ ಡಯಾಗ್ನಾಸ್ಟಿಕ್ಸ್ ಉದ್ಯಮ ನಿಕಟ ಸಂಪರ್ಕ ಹೊಂದಿರುವುದು ಬಹಳ ಮುಖ್ಯ ಎಂದು ಸೆರಿಜೆನ್ ಮೆಡಿಪ್ರೊಡಕ್ಟ್ಸ್ ಸಂಸ್ಥಾಪಕ ಡಾ. ಅನೂಯಾ ನಿಸಲ್ ತಿಳಿಸಿದರು.

### ನಿಯಂತ್ರಣ ಸಂಸ್ಥೆಗಳ ಬೆಂಬಲ: ಷಾ ಸಲಹೆ

ಬಯೋಕಾನ್ ಮುಖ್ಯಸ್ಥೆ ಡಾ. ಕಿರಣ್ ಮಜುಂದಾರ್ ಷಾ ಅವರು, "ಬಿ.ಟಿ.ಯ ಭವಿಷ್ಯವನ್ನು ರೂಪಿಸುತ್ತಿರುವ ಹೊಸ ತಂತ್ರಜ್ಞಾನಗಳು" ಕುರಿತ ಗೋಷ್ಠಿಯಲ್ಲಿ ಪಾಲ್ಗೊಂಡು, "ಭಾರತದ ಬಯೋಟೆಕ್ ಕ್ಷೇತ್ರದ ನವೀನ ಆವಿಷ್ಕಾರಗಳಿಗೆ ಕ್ಷಿಪ್ರವಾಗಿ ಪರವಾನಗಿ ದೊರಕಬೇಕು. ಇದಕ್ಕಾಗಿ ನಿಯಂತ್ರಣ ಸಂಸ್ಥೆಗಳ ಬೆಂಬಲ ಬೇಕು. ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಚೀನಾ ದಾಪುಗಾಲು ಇಡುತ್ತಿದ್ದು. ನಿಯಂತ್ರಣದ ವಿಷಯಗಳಿಗೆ ಸಂಬಂಧಿಸಿದಂತೆ ತ್ವರಿತ ಸ್ಪಂದನೆಯಲ್ಲಿ ಚೀನಾ ಮುಂದಿರುವುದೇ ಇದಕ್ಕೆ ಕಾರಣವಾಗಿದೆ. ಭಾರತದಲ್ಲಿಯೂ ನಾವೀನ್ಯ–ಸ್ನೇಹಿ ನಿಯಂತ್ರಣ ವ್ಯವಸ್ಥೆ ಇರಬೇಕು. ಜೈವಿಕ ತಂತ್ರಜ್ಞಾನ ಕ್ಷೇತ್ರದ ಪ್ರವರ್ತಕ ಹೆಜ್ಜೆಗಳಿಗೆ ನಿಯಂತ್ರಣ ಸಂಸ್ಥೆಗಳು ವೇಗವಾಗಿ ಸ್ಪಂದಿಸಬೇಕು ಎಂಬುದು ಉದ್ಯಮದ ಆಶಯವಾಗಿದೆ. 2047ರ ವಿಕಸಿತ ಭಾರತಕ್ಕಾಗಿ ನಾವು ಜಾಗತಿಕವಾಗಿ ಸ್ಪರ್ಧಿಸುವ ಮಟ್ಟಕ್ಕೆ ಸುಸ್ಥಿರವಾಗಿ ಬೆಳೆದು ಬಯೋಟೆಕ್‌ನಲ್ಲಿ ಸ್ವಾಯತ್ತತೆಯನ್ನು ಸಾಧಿಸಬೇಕಿದೆ" ಎಂದು ಅವರು ತಿಳಿಸಿದರು. ನೀತಿ ಫ್ರಾಂಟಿಯರ್ ಟೆಕ್ ಹಬ್‌ನ ದೇಬ್‌ಜಾನಿ ಘೋಷ್ ಅವರು, "ಪ್ರಸ್ತುತ 1.6 ಲಕ್ಷಕೋಟಿ ಡಾಲರ್‌ಗಳಷ್ಟಿರುವ ಜಾಗತಿಕ ಬಯೋಟೆಕ್ ಮಾರುಕಟ್ಟೆಯು 2030ರ ವೇಳೆಗೆ 3.9 ಲಕ್ಷಕೋಟಿ ಡಾಲರ್ ತಲುಪಲಿದೆ. ಸದ್ಯಕ್ಕೆ ಅಮೆರಿಕ ಈ ವಲಯದಲ್ಲಿ ಅಗ್ರಸ್ಥಾನದಲ್ಲಿದ್ದು, 2030ರ ವೇಳೆಗೆ ಚೀನಾ ಈ ಸ್ಥಾನವನ್ನು ತನ್ನದನ್ನಾಗಿಸಿಕೊಳ್ಳಲಿದೆ. ಚೀನಾದ ನವೀನತೆಯ ಪರವಾದ ನಿಯಂತ್ರಣಗಳೇ ಅಲ್ಲಿನ ಬಿಟಿ ಪ್ರಗತಿಗೆ ಮುಖ್ಯಕಾರಣವಾಗಿದೆ" ಎಂದು ವಿವರಿಸಿದರು. "ದೇಶದ ಜೈವಿಕ ಆರ್ಥಿಕತೆಯು 2024ರಲ್ಲಿ 165.7 ಶತಕೋಟಿ ಡಾಲರ್ ಇತ್ತು. 2030ರಲ್ಲಿ ಇದು 330 ಶತಕೋಟಿ ಡಾಲರ್ ಆಗಲಿದ್ದು, 2047ರಲ್ಲಿ 1.2 ಲಕ್ಷ ಕೋಟಿ ಡಾಲರ್ ತಲುಪುವ ಅಂದಾಜಿದೆ" ಎಂದು ಎಬಿಎಲ್‌ಇ ಅಧ್ಯಕ್ಷ ಜಿ.ಎಸ್. ಕೃಷ್ಣನ್ ಹೇಳಿದರು.

ಏಟ್ರಿಯಾ ವಿ.ವಿ. ಡೀನ್ ಡಾ. ಪ್ರಫುಲ್‌ಚಂದ್ರ, 'ಸ್ಟ್ರಿಂಗ್ ಬಯೋ' ಸಂಸ್ಥೆಯ ಸಿಇಒ ಡಾ. ಎಳಿಲ್ ಸುಬಿಯನ್, 'ಲಾಸ್ ಫಂಕ್'ನ ಪಾರಸ್ ಚೋಪ್ರಾ, 'ಕ್ಲಾಸಿಕ್' ಕಂಪನಿಯ ನೀರ್ ಮಿನಾರ್ಬಿ, 'ಐಡಿಯ ಸ್ಪ್ರಿಂಗ್ ಕ್ಯಾಪಿಟಲ್'ನ ಸೂರ್ಯಪ್ರಕಾಶ್ ಕೊಣನೂರು, 'ಆಂಕೊ ಸಿಸ್ಟಮ್'ನ ಡಾ. ಮಂಜಿರಿ ಭಾಕ್ರೆ, 'ಪೆಪ್ಟಿಸ್ ಟೆಕ್ನಾಲಜೀಸ್'ನ ಡಾ. ಶ್ರೀಧರ್ ನಾರಾಯಣನ್, ಐಐಟಿ ಬಾಂಬೆಯ ದೇಬ್ಜಾನಿ ಪೌಲ್, ಬಿಗ್‌ಟೆಕ್ ಸಂಸ್ಥೆಯ ಡಾ.ಸತ್ಯಪ್ರಕಾಶ್ ದಾಸ್, ರೆಮಿಡಿಯೋ ಇನ್ನೊವೇಟಿವ್ ಸಲ್ಯೂಷನ್ಸ್‌ನ ಸಿಇಒ ಡಾ. ಆನಂದ್ ಶಿವರಾಮನ್ ಸೇರಿದಂತೆ ಹಲವಾರು ಪರಿಣತರು ಗೋಷ್ಠಿಗಳಲ್ಲಿ ಭಾಗವಹಿಸಿದ್ದರು.

## ನೆನಪಿನಲ್ಲಿಡಬೇಕಾದ ಮಾತು



"ಇರುವೆಯಾಗಿರಬೇಕೆಂಬುದೇ ನನ್ನ ಅಭಿಲಾಷೆ. ಬೆಲ್ಲವಾಗಬೇಕೆಂಬ ತವಕವಿಲ್ಲ. ನಾನೇ ಬೆಲ್ಲವಾದರೆ ಅದರ ರುಚಿಯನ್ನು ಸವಿಯುವುದು ಹೇಗೆ? ಪರಮೇಶ್ವರನ ಭಕ್ತನಾದರೆ ಸಾಕು ನನಗೆ! ಆ ರುಚಿಯ ಮಾಧುರ್ಯವೇ ನನಗೆ ಅಮೃತಪಾನ."

- ನಾ. ಕಸ್ತೂರಿ
'ಸತ್ಯಂ ಶಿವಂ ಸುಂದರಂ'
ಭಗವಾನ್ ಶ್ರೀಸತ್ಯಸಾಯಿ ಬಾಬಾ ದಿವ್ಯಚರಿತ್ರೆ ಭಾಗ.2. ಪುಟ26

# ಮಾನವೀಯತೆಯ ಸಾಕಾರಮೂರ್ತಿ ಡಾ. ಸಿ. ಪಳನಿವೇಲು

◀◀ ...2ನೇ ಪುಟದಿಂದ

### ಈ ಕ್ಷೇತ್ರ ನನ್ನದಲ್ಲ

ಒಮ್ಮೆ ತಮಿಳುನಾಡಿನ ಹಿರಿಯ ಕಾಂಗ್ರೆಸ್ ನಾಯಕರಾಗಿದ್ದ ಕಾಮರಾಜ್ ಅವರು ಇವರ ಗ್ರಾಮಕ್ಕೆ ಆಗಮಿಸಿದ್ದರು. ಅಲ್ಲಿನ ಸಭೆಯಲ್ಲಿ ಗ್ರಾಮಸ್ಥರ ಬಲವಂತಕ್ಕೆ ಕಟ್ಟುಬಿದ್ದು ಡಾ. ಪಳನಿವೇಲು ಭಾಷಣ ಮಾಡಿದರು. ಡಾ. ಪಳನಿವೇಲು ಅವರ ಭಾಷಣ ಕೇಳಿದ ಕಾಮರಾಜ್ ಅವರು ಇವರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವಂತೆ ತಮ್ಮ ಅನುಯಾಯಿಗಳಿಗೆ ಸೂಚನೆ ನೀಡಿದರೂ 'ರಾಜಕೀಯ ಕ್ಷೇತ್ರ ತಮ್ಮದಲ್ಲ' ಎಂದು ಭಾವಿಸಿದ ಪಳನಿವೇಲು ತಮ್ಮ ಮೂಲ ಉದ್ದೇಶಕ್ಕೆ ಕಟ್ಟುಬಿದ್ದು, ಕಾಮರಾಜ್ ಅವರ ಸಲಹೆಯನ್ನು ನಯವಾಗಿ ತಿರಸ್ಕರಿಸಿದರು. ತಮ್ಮ ಗುರುಗಳಾದ ಪ್ರೊ. ಎ. ಉಮಾಪತಿ ಅವರ ಎಚ್ಚರಿಕೆಯಂತೆ ತಮ್ಮ ಓದಿನ ಬಗೆಗೆ ಗಂಭೀರವಾದ ಗಮನ ಕೊಡಲು ಪ್ರಾರಂಭಿಸಿದರು.

ಮಧುರೈನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿದ್ದ ಪ್ರೊ. ಸಿ. ಕಾಳಿದಾಸ್ ಅವರಂತಹ ಮಹಾನ್ ಗುರುಗಳ ಸಾನ್ನಿಧ್ಯದಲ್ಲಿ ಡಾ. ಪಳನಿವೇಲು ಅವರು ಸರ್ಜರಿಯಲ್ಲಿ ಎಂ.ಎಸ್. ಪದವಿ ಪಡೆದರು. ಸ್ನಾತಕೋತ್ತರ ಪದವಿಯ ಅನಂತರ ಅದೇ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸಕ್ಕೆ ಸೇರಿ ಸೇವೆ ಸಲ್ಲಿಸಿದರು.

### ತಾತ್ಕಾಲಿಕ ಸುಖ ನನಗೆ ಬೇಡ

ಆರೋಗ್ಯ ಸಚಿವರ ಸಹಾಯದಿಂದ ತಮಗೆ ಪ್ರಿಯವಾದ ತಾವು ವ್ಯಾಸಂಗ ಮಾಡಿದ ಮದ್ರಾಸಿನ ಸ್ಟಾನ್ಲಿ ಕಾಲೇಜಿಗೆ ಸಹಾಯಕ ಪ್ರಾಧ್ಯಾಪಕರಾಗಿ ಸೇರಿದರು. ಎಂ.ಎಸ್. ಪದವಿ ಪಡೆಯುವ ಸಂದರ್ಭದಲ್ಲಿ ಗುತ್ತಿಗೆದಾರರ ಮಗಳಾದ ಜಯಾ ಅವರೊಡನೆ ಅವರ ವಿವಾಹವಾಯಿತು.

ಸೇಲಂನಲ್ಲಿ ಡಾ. ಪಳನಿವೇಲು ಅವರಿಗಾಗಿ ಅವರ ಮಾವ ಬಹುದೊಡ್ಡ ಆಸ್ಪತ್ರೆಯ ನಿರ್ಮಾಣಕ್ಕೆ ಮುಂದಾದರು. ಹೆಚ್ಚು ಕಡಿಮೆ ತಾವು ಅಲ್ಲಿಯೇ ನೆಲೆಗೊಳ್ಳಬೇಕೆಂದು ಡಾ. ಪಳನಿವೇಲು ನಿರ್ಧಾರ ಕೂಡ ಮಾಡಿದ್ದರು. ಆದರೆ ಅವರ ಬದುಕಿನಲ್ಲಿ ಒಂದು ಅನಿರೀಕ್ಷಿತ ತಿರುವು ದೊರೆಯುತ್ತದೆ. ಇವರ ಅಧ್ಯಾಪಕರಾಗಿದ್ದ ಪ್ರೊ. ಎನ್. ರಂಗಭಾಷ್ಯಂ ಅವರು ತಮ್ಮ ಮಾರ್ಗದರ್ಶನದಲ್ಲಿ ಎಂ.ಸಿಎಚ್. (Magister Chirurgiae ಅಂದರೆ Master of Surgery) ಪದವಿ ವ್ಯಾಸಂಗ ಮಾಡಲು ಡಾ. ಪಳನಿವೇಲು ಅವರಿಗೆ ಆಹ್ವಾನ ನೀಡಿದರು. ಅದು ಆರ್ಥಿಕವಾಗಿ ಅಂತಹ ಲಾಭದಾಯಕವಲ್ಲದಿದ್ದರೂ ಡಾ. ಪಳನಿವೇಲು ಅವರು ತಮ್ಮ ಭವಿಷ್ಯಕ್ಕಾಗಿ ಎಲ್ಲವನ್ನು ತೊರೆದು ತಮ್ಮ ಪ್ರಾಧ್ಯಾಪಕರ ಬಳಿಗೆ ಹೋದರು. ಅವರ ಸಾಹಸಶೀಲತೆಗೆ ಇದೊಂದು ಬಹುದೊಡ್ಡ ಉದಾಹರಣೆ. ಅಲ್ಲಿಂದ ಮುಂದಕ್ಕೆ ಅವರು ನಿಜವಾದ ಡಾ. ಪಳನಿವೇಲು ಆಗಿ ಗುರುತಿಸಲ್ಪಡುತ್ತಾರೆ.

ಡಾ. ಪಳನಿವೇಲು ಅವರು ಒಮ್ಮೆ ಚೆನ್ನೈ ಸರ್ಕಾರಿ ಆಸ್ಪತ್ರೆಗೆ ಹೋದಾಗ ನಡೆದ ಒಂದು ಘಟನೆ ಅತ್ಯಂತ ಸ್ವಾರಸ್ಯಕರವಾಗಿದೆ. ಇವರು ಆಪರೇಷನ್ ಮಾಡಿದ ಪೇಷಂಟ್‌ಗಳು ಮನೆಗೆ ಹೋಗುವ ಮುಂಚೆ ಇವರಿಗೆ ಥ್ಯಾಂಕ್ಸ್ ಹೇಳಲು ಗಂಟೆಗಟ್ಟಲೆ ಕಾಯುತ್ತಿದ್ದ ಪರಿಸ್ಥಿತಿಯನ್ನು ಕಂಡು ಇವರ ಸಹೋದ್ಯೋಗಿ ಡಾ. ರತ್ನಸ್ವಾಮಿ 'ಏಕೆ ಇಲ್ಲಿಗೆ ಬಂದು ಕಾಯುತ್ತಿದ್ದಾರೆ' ಎಂದು ಇವರನ್ನು ಪ್ರಶ್ನೆ ಮಾಡಿದಾಗ ಡಾ. ಪಳನಿವೇಲು ಅವರು ಹೇಳುವ ಮಾತುಗಳಿವು: "ಅವರು ಯಾಕೆ ಕಾಯುತ್ತಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನನ್ನ ಪಾಲಿಗೆ ಅವರು ಹಳ್ಳಿಯಿಂದ ಬಂದಿರುವ ಬಡವರು. ನಾನು ಅವರಲ್ಲಿ ನನ್ನ ಕುಟುಂಬ ಮತ್ತು ನನ್ನ ಸಂಬಂಧಿಕರನ್ನು ಕಾಣಲು ಬಯಸುತ್ತೇನೆ". ಭಾರತದಂಥ ಸಾಮಾಜಿಕ ವೈರುಧ್ಯವಿರುವ ದೇಶದಲ್ಲಿ ವೈದ್ಯರ ದೃಷ್ಟಿಕೋನ ಹೇಗಿರಬೇಕು ಎಂಬುದನ್ನು ಡಾ. ಪಳನಿವೇಲು ಸೂಚ್ಯವಾಗಿ ಅಲ್ಲಿ ಹೇಳಿದ್ದಾರೆ.

### ಮನಸ್ಸಿನಲ್ಲಿ ತುಮುಲ, ನಿಸ್ಸಾಹಯಕತೆ

ಒಂದು ಸಂದರ್ಭದಲ್ಲಿ ಇವರ ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು ತಪ್ಪು ತಿಳಿದುಕೊಂಡು ಇವರನ್ನು ನಿರ್ಲಕ್ಷ್ಯ ಮಾಡಿದರು. ಆಗ ಬಹುವಾಗಿ ನೊಂದುಕೊಂಡ ಡಾ. ಪಳನಿವೇಲು ಅವರು ಎಂ.ಸಿಎಚ್. ಕೋರ್ಸ್‌ನ್ನು ಮಧ್ಯದಲ್ಲಿ ತೊರೆಯಲು ಯೋಚಿಸುತ್ತಿದ್ದರು. ಅಂತಹ ಸಂದರ್ಭದಲ್ಲಿ ಅವರ ವಿದ್ಯಾರ್ಥಿಯೊಬ್ಬರ ಪ್ರೇರಣೆಯಿಂದ ಆ ಆಲೋಚನೆಯನ್ನು ಬಿಟ್ಟು ಅಲ್ಲಿಯೇ ಮುಂದುವರಿದರು. ಇಷ್ಟಾದರೂ ಇಲಾಖೆಯಲ್ಲಿ ಕಿರುಕುಳ ನಿಲ್ಲುವುದಿಲ್ಲ. ಇದರಿಂದಾಗಿ ಮೊದಲನೇ ಸಲಕ್ಕೆ ಎಂ.ಸಿಎಚ್. ಕೋರ್ಸ್ ಮುಗಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಆದರೆ ಡಾ. ಪಳನಿವೇಲು ಸುಲಭವಾಗಿ ಸೋಲನ್ನು ಒಪ್ಪಿಕೊಳ್ಳುವವರಲ್ಲ. ಎರಡನೇ ಸಲ ಬೇರೆ ರಾಜ್ಯದಿಂದ ಬಂದ ಪರೀಕ್ಷಕರ ಮುಂದೆ ತಮ್ಮ ಅರ್ಹತೆಯನ್ನು ಸಮರ್ಥವಾಗಿ ಮಂಡಿಸಿ ಎಂ.ಸಿಎಚ್. ಪದವಿ ಪಡೆದರು. ಇನ್ನು ತಾವು ಮದ್ರಾಸಿನಲ್ಲಿರುವುದು ಸಾಧ್ಯವಿಲ್ಲವೆಂದುಕೊಂಡು ಮಧುರೈನ ರಾಜಾಜಿ ವೈದ್ಯಕೀಯ ಕಾಲೇಜಿಗೆ ಉಪನ್ಯಾಸಕರಾಗಿ ಹೋದರು. ಅಲ್ಲಿಂದ ಕೊಯಮತ್ತೂರಿನ ವೈದ್ಯಕೀಯ ಕಾಲೇಜಿಗೆ ಅವರ ವರ್ಗಾವಣೆಯಾಯಿತು. ಡಾ. ಪಳನಿವೇಲು ಸರ್ಕಾರಿ ಕೆಲಸದಲ್ಲಿ ಎಲ್ಲರೂ ಅನುಭವಿಸುವ ಕಿರುಕುಳ ಮತ್ತು ಅವಮಾನಗಳನ್ನು ಅನುಭವಿಸುತ್ತಿದ್ದರು.

### ಗುರಿ ಕಾಣಿಸಿತು

ಕೊಯಮತ್ತೂರಿನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಡಾ. ಪಳನಿವೇಲು ಅವರು ಜಯಮೇರಿ ಎನ್ನುವ ಪೇಶೇಂಟ್‌ಗೆ ಅನ್ನನಾಳಕ್ಕೆ ಸಂಬಂಧಪಟ್ಟಂತೆ ಆಪರೇಷನ್ ಮಾಡಿದರು. ಇದರಲ್ಲಿ ಅವರು ಅನುಸರಿಸಿದ ತಂತ್ರ ವಿನೂತನವಾಗಿದ್ದು, ಅದವರ ವೃತ್ತಿಜೀವನಕ್ಕೆ ಒಂದು ಅದ್ಭುತವಾದ ತಿರುವುನ್ನು ನೀಡಿತು. 1990ರಲ್ಲಿ ಕೊಯಂಬತ್ತೂರಿನ ವೈದ್ಯಕೀಯ ಕಾಲೇಜಿನಲ್ಲಿ ನಡೆಸಿದ ಕರುಳಿನ ಕಾಯಿಲೆ ಕುರಿತಾದ ವಿಚಾರಸಂಕೀರ್ಣ ಡಾ. ಪಳನಿವೇಲು ಅವರ ಸಂಶೋಧನಾ ಮನೋಭಾವಕ್ಕೆ ಮತ್ತು ಆಸಕ್ತಿಗೆ ಹಿಡಿದ ಕೈಗನ್ನಡಿಯಾಗಿದೆ. ಇಂತಹ ಅನೇಕ ವಿಚಾರಸಂಕಿರಣಗಳನ್ನು ಅವರು ಆಯೋಜಿಸಿರುವುದಲ್ಲದೆ, ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ನಡೆದ ವಿಚಾರ ಸಂಕಿರಣಗಳಲ್ಲಿ ಪ್ರಬಂಧಕಾರರಾಗಿ ಭಾಗವಹಿಸಿ ದೇಶಕ್ಕೆ ಕೀರ್ತಿ ತಂದಿದ್ದಾರೆ.

### ಮೊದಲ ಲ್ಯಾಪ್ರೋಸ್ಕೋಪಿಕ್ ಸರ್ಜರಿ

ಡಾ. ಪಳನಿವೇಲು ಅವರಿಗೆ ಕಲಿಯುವಿಕೆಯಲ್ಲಿನ ಆಸಕ್ತಿ ಜನ್ಮದತ್ತವಾಗಿ ಬಂದ ಗುಣವಾಗಿದೆ. 1991ರಲ್ಲಿ ತಮ್ಮ ಎಲ್ಲಾ ಸಂಪನ್ಮೂಲವನ್ನು ಕ್ರೋಢೀಕರಿಸಿ, ಜೊತೆಗೆ ಸಾಲ ಮಾಡಿ ಸಿಂಗಪುರದಲ್ಲಿ ಜರುಗಿದ ಲ್ಯಾಪ್ರೋಸ್ಕೋಪಿಕ್ ತರಬೇತಿ ಕಾರ್ಯಕ್ರಮಕ್ಕೆ ಹೋಗಿದ್ದರು. ಅಲ್ಲಿಂದ ಬಂದ ಅವರು ಅದೇ ವರ್ಷದ ಅಕ್ಟೋಬರ್‌ನಲ್ಲಿ ಭಾರತದ ಮೊದಲ ಲ್ಯಾಪ್ರೋಸ್ಕೋಪಿಕ್ ಕಾರ್ಯಾಗಾರವನ್ನು ಸಂಘಟಿಸಿದರು.

ಡಾ. ಪಳಿನಿವೇಲು ಅವರು ಸಣ್ಣರಂಧ್ರದ ಮೂಲಕ ಪಿತ್ತಕೋಶವನ್ನು ತೆಗೆಯುವ 'ಲ್ಯಾಪ್ ಕೋಲೆ' ಶಸ್ತ್ರಚಿಕಿತ್ಸೆ ದಕ್ಷಿಣ ಭಾರತದಲ್ಲಿ ಮೊದಲನೆಯದು ಎನಿಸುತ್ತದೆ. ಅಲ್ಲಿಂದ ಅವರು ಇತಿಹಾಸವನ್ನು ಬರೆಯುತ್ತಾ ಹೋದರು. ಈ ಮೊದಲು ಪಿತ್ತಕೋಶವನ್ನು ತೆಗೆದುಹಾಕುವ ಶಸ್ತ್ರಚಿಕಿತ್ಸೆ 3.20 ಗಂಟೆ ತೆಗೆದುಕೊಳ್ಳುತ್ತಿತ್ತು. ಡಾ. ಪಳನಿವೇಲು ಅವರು ಈ ನವೀನ ಶಸ್ತ್ರಚಿಕಿತ್ಸೆಗೆ ಕೇವಲ 30 ನಿಮಿಷಗಳನ್ನು ತೆಗೆದುಕೊಂಡು ವೈದ್ಯಲೋಕದ ಗಮನವನ್ನು ತಮ್ಮತ್ತ ಸೆಳೆದರು. ಲೆಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆಯ ಮೂಲಕ ಅಪೆಂಡೆಕ್ಟಮಿ ಶಸ್ತ್ರಚಿಕಿತ್ಸೆಯನ್ನು ಮಾಡುವ ಕಾರ್ಯಾಗಾರವನ್ನು ಸಂಘಟಿಸಿ, ಅಲ್ಲಿ ತಾವೇ ಲ್ಯಾಪ್ರೋಸ್ಕೋಪಿಕ್ ಮೂಲಕ ಅಪೆಂಡೆಕ್ಟಮಿ ಶಸ್ತ್ರಚಿಕಿತ್ಸೆಯನ್ನು ಮಾಡಿ ಈ ವಿಧಾನದಲ್ಲಿದ್ದ ಸಂಶಯಗಳನ್ನು ನಿವಾರಣೆ ಮಾಡಿದರು. ಡಾ. ಪಳನಿವೇಲು ಅವರು ಸಂಘಟನೆ ಮಾಡಿದ ಇಂತಹವುದೇ ಒಂದು ಕಾರ್ಯಾಗಾರಕ್ಕೆ ನಾನು



ಕೂಡ ಹೋಗಿದ್ದೆ. ಅವರು ಸರ್ಜನ್‌ಗಳಿಗೆ ನೀಡುವ ಟಿಪ್ಸ್ ತುಂಬಾ ಮಹತ್ವದ್ದು. ಎಲ್ಲ ಸರ್ಜನ್‌ಗಳು ಅವರ ಮಾರ್ಗದರ್ಶನವನ್ನು ತಮ್ಮ ವೃತ್ತಿಜೀವನದಲ್ಲಿ ಅನುಸರಿಸುವುದು ಇಂದು ಸಾಮಾನ್ಯವಾಗಿದೆ. ಅಲ್ಲಿಂದ ತರಬೇತಿ ಪಡೆದ ಮೇಲೆ ನಾನು ತುಮಕೂರಿನ ಶ್ರೀದೇವಿ ಆಸ್ಪತ್ರೆಯಲ್ಲಿ ಲ್ಯಾಪ್ರೋಸ್ಕೋಪಿಕ್ ಸರ್ಜರಿಮಾಡಲು ಪ್ರಾರಂಭ ಮಾಡಿದೆ. ಇಂದಿಗೂ ನಮ್ಮ ಆಸ್ಪತ್ರೆಯಲ್ಲಿ ಇದೇ ವಿಧಾನವನ್ನು ಅನುಸರಿಸಲಾಗುತ್ತಿದೆ.

### ಡಾ. ಬಿ.ಸಿ. ರಾಯ್ ರಾಷ್ಟ್ರೀಯ ಪ್ರಶಸ್ತಿ

ಇಡೀ ಭಾರತದಲ್ಲಿ ಲ್ಯಾಪ್ರೋಸ್ಕೋಪಿ ಶಸ್ತ್ರಚಿಕಿತ್ಸೆಗೆ ಕೊಯಮತ್ತೂರು ಕೇಂದ್ರವಾಗಬೇಕು ಎನ್ನುವ ರೀತಿಯಲ್ಲಿ ಡಾ. ಪಳನಿವೇಲು ಕೆಲಸ ಮಾಡಿದ್ದಾರೆ. ವೈದ್ಯಕೀಯ ಕ್ಷೇತ್ರದ ಅವರ ಅಮೋಘ ಸಾಧನೆಗಾಗಿ ಭಾರತ ಸರ್ಕಾರ 'ಬಿ.ಸಿ. ರಾಯ್ ರಾಷ್ಟ್ರೀಯ ಪ್ರಶಸ್ತಿ'ಯನ್ನು ಮೊದಲ ಬಾರಿಗೆ ನೀಡಿತು. ಅದನ್ನು ಅಂದಿನ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಅವರಿಂದ ಪಡೆಯುತ್ತಾರೆ.

### ಅಂತಾರಾಷ್ಟ್ರೀಯ ವಿಚಾರಸಂಕೀರ್ಣದಲ್ಲಿ ಪ್ರಬಂಧ ಮಂಡನೆ

ಈ ಮಧ್ಯೆ ಅಮೆರಿಕಕ್ಕೆ ಭೇಟಿ ನೀಡಿ ವಾಷಿಂಗ್ಟನ್ ಆರೋಗ್ಯ ವಿಶ್ವವಿದ್ಯಾಲಯದ ಆಸ್ಪತ್ರೆಯಲ್ಲಿ ಮಾಡಿದ ಲ್ಯಾಪ್ರೋಸ್ಕೊಪಿಕ್ ಮತ್ತು ಕೊಲಿಸಿಸ್ಟೆಕ್ಟಮಿ (Cholecystectomy) ಶಸ್ತ್ರಚಿಕಿತ್ಸೆಗಳನ್ನು ಡಾ. ಪಳನಿವೇಲು ಗಮನಿಸುತ್ತಾರೆ. ಶಸ್ತ್ರಚಿಕಿತ್ಸಾ ಶಿಷ್ಟಾಚಾರದಲ್ಲಿ ಅಂತಹ ವ್ಯತ್ಯಾಸವಿರುವುದಿಲ್ಲ. ಅದರಿಂದ ಡಾ. ಪಳನಿವೇಲು ಅವರ ಆತ್ಮವಿಶ್ವಾಸ ಮತ್ತಷ್ಟು ವೃದ್ಧಿಯಾಗುತ್ತದೆ.

1996ರಲ್ಲಿ ಡಾ. ಪಳನಿವೇಲು ಅವರು 'ಐದನೆಯ ವಿಶ್ವ ಎಂಡೊಸ್ಕೋಪಿಕ್ ಸರ್ಜರಿಯ ಸಮ್ಮೇಳನ'ದಲ್ಲಿ ಭಾಗವಹಿಸಿ ಎರಡು ಸಂಶೋಧನಾ ಪ್ರಬಂಧಗಳನ್ನು ಮಂಡಿಸುತ್ತಾರೆ. ಅವುಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆತಾಗ ಡಾ. ಪಳನಿವೇಲು ಉವರಲ್ಲಿದ್ದ ಸಂಶೋಧನಾಸಕ್ತಿ ಮತ್ತಷ್ಟು ಗರಿಗೆದರುತ್ತದೆ. ಹರ್ನಿಯಾ ಶಸ್ತ್ರಚಿಕಿತ್ಸೆ ಸಾಕಷ್ಟು ಸವಾಲಿನದಾಗಿದ್ದು ಅದನ್ನು ಲ್ಯಾಪ್ರೋಸ್ಕೊಪಿಕ್ ಮೂಲಕ ನೆರವೇರಿಸಿದ ಕೀರ್ತಿ ಡಾ. ಪಳನಿವೇಲು ಅವರಿಗೆ ಸಲ್ಲುತ್ತದೆ. ಈ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಪೇಶೆಂಟ್ ಒಂದೇ ದಿನದಲ್ಲಿ ಚೇತರಿಸಿಕೊಂಡು ಮನೆಗೆ ಹೋದ ಸನ್ನಿವೇಶವನ್ನು ಡಾ. ಪಳನಿವೇಲು ಅವರು ಉತ್ಸಾಹದಿಂದ ವಿವರಿಸುತ್ತಾರೆ.

### ಆಕರ ಗ್ರಂಥಗಳ ಪ್ರಕಟಣೆ

ಅವರು 1998ರಲ್ಲಿ 'ಆರ್ಟ್ ಆಫ್ ಲ್ಯಾಪ್ರೋಸ್ಕೋಪಿಕ್ ಸರ್ಜರಿ: ಬೇಸಿಕ್ ಟು ಅಡ್ವಾನ್ಸ್' (Art of Laparoscopic Surgery: Basic To Advance) ಎಂಬ ಗ್ರಂಥವನ್ನು ಪ್ರಕಟಿಸುತ್ತಾರೆ. ಇದು ಇಂದಿಗೂ ಲ್ಯಾಪ್ರೋಸ್ಕೋಪಿಕ್ ಸರ್ಜರಿಯ ಬಗ್ಗೆ ತಿಳಿಯಲು ಇರುವ ಪ್ರಮುಖ ಗ್ರಂಥವಾಗಿದೆ. ಅದೇ ವರ್ಷ ಡಾ. ಪಳನಿವೇಲು ಅವರ ಎರಡನೆಯ ಕೃತಿ "ಸಿಜೆಸ್ ಅಟ್ಲಾಸ್ ಆಫ್ ಲ್ಯಾಪ್ರೋಸ್ಕೋಪಿಕ್ ಸರ್ಜರಿ" (CIGES Atlas of Laparoscopic Surgery) ಸಿಂಗಪುರ್‌ನಲ್ಲಿ ಬಿಡುಗಡೆಯಾಯಿತು. ಈ ಕೃತಿಯು ವೈದ್ಯಕೀಯ ವಿದ್ಯಾರ್ಥಿಗಳಿಗೆ ಅಮೂಲ್ಯವಾದ ಆಕರ ಗ್ರಂಥವಾಗಿದೆ. ನಿರಂತರವಾಗಿ ಈ ಕೃತಿ ಪುನರ್ ಮುದ್ರಣವಾಗುತ್ತಿರುವುದು ಅದರ ಜನಪ್ರಿಯತೆಗೆ ಸಾಕ್ಷಿ. 2004ರಲ್ಲಿ ಡಾ. ಪಳನಿವೇಲು ಅವರು 'ಅಟ್ಲಾಸ್ ಕಮ್ ಟೆಕ್ಸ್ಟ್‌ಬುಕ್' ಗ್ರಂಥವನ್ನು ಪ್ರಕಟಿಸಿದರು. ಡಾ. ಪಳನಿವೇಲು ಅವರ ಈ ಕೃತಿಯು ಸಹ ನಿರಂತರವಾಗಿ ಪುನರ್ ಮುದ್ರಣವಾಗುತ್ತಾ ಬರುತ್ತಿದೆ.

ಡಾ. ಪಳನಿವೇಲು ಅವರು ವಿಶ್ವದ ಎಲ್ಲೆಡೆ ನಡೆಯುವ ಲ್ಯಾಪ್ರೋಸ್ಕೋಪಿಕ್ ವಿಚಾರ ಸಂಕಿರಣಗಳಲ್ಲಿ ಸಕ್ರಿಯವಾಗಿ ಪಾಲುಗೊಂಡು ಪ್ರಬಂಧಗಳನ್ನು ಮಂಡಿಸಿದ್ದಾರೆ. ಪ್ರಾಯೋಗಿಕವಾಗಿ ಅಲ್ಲಿನ ಆಸ್ಪತ್ರೆಗಳಲ್ಲಿ ಅರ್ಹ ರೋಗಿಗಳಿಗೆ ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆಗಳನ್ನು ನೆರವೇರಿಸಿದ್ದಾರೆ. ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆಯಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಡಾ. ಪಳನಿವೇಲು ಅವರು ನಿರಂತರವಾಗಿ ಮಾಡುತ್ತಿದ್ದಾರೆ. ಶಸ್ತ್ರಚಿಕಿತ್ಸಾವಲಯದಲ್ಲಿ "ಪಳಿನಿವೇಲು ಹೊಲಿಗೆ ವಿಧಾನ" ಎಂಬ ಆಪರೇಷನ್ ತಂತ್ರವು ಬಹಳ ಜನಪ್ರಿಯವಾಗಿದೆ.

### ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧಕ್ಕೆ ಮಾನ್ಯತೆ

ರೋಮ್‌ನಲ್ಲಿ ನಡೆದ ವಿಶ್ವ ಆರನೆಯ ಎಂಡೋಸ್ಕೋಪಿಕ್ ಸರ್ಜರಿಯ ಸಮ್ಮೇಳನದಲ್ಲಿ ಡಾ. ಪಳನಿವೇಲು ಮಂಡಿಸಿದ ಪ್ರಬಂಧ ಶ್ರೇಷ್ಠ ಪ್ರಬಂಧವೆಂಬ ಮನ್ನಣೆಗೆ ಪಾತ್ರವಾಗುತ್ತದೆ. ಇದು ಭಾರತದ ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬರೂ ಹೆಮ್ಮೆ ಪಡಬೇಕಾದ ವಿಚಾರ. ಇದು ಮೊದಲ ಸಲ ಅಭಿವೃದ್ಧಿಶೀಲ ರಾಷ್ಟ್ರದ ಶಸ್ತ್ರಚಿಕಿತ್ಸಕರೊಬ್ಬರು ಪಡೆದ ವಿಶ್ವಶ್ರೇಷ್ಠ ಮನ್ನಣೆಯಾಗಿದೆ. ಅತ್ಯಂತ ದುರದೃಷ್ಟದ ಸಂಗತಿ ಎಂದರೆ ಈ ಸುದ್ದಿಯನ್ನು ಯಾವುದೇ ರಾಷ್ಟ್ರೀಯ ಮಾಧ್ಯಮವೂ ಪ್ರಕಟಿಸಲಿಲ್ಲ. ತಮಿಳುನಾಡಿನ ಕೆಲವು ಪ್ರಾದೇಶಿಕ ಪತ್ರಿಕೆಯಲ್ಲಿ ಇದು ಪ್ರಕಟವಾಗಿದ್ದಿರಬಹುದು. ನಮ್ಮ ಮಾಧ್ಯಮ ಮಿತ್ರರಿಗೆ ಆರೋಗ್ಯದ ವಿಚಾರದಲ್ಲಿ ಜನರಿಗೆ ಅಮೂಲ್ಯ ಮಾಹಿತಿ ಕೊಡಬೇಕೆಂಬ ಅರಿವಾಗಲೀ, ಆಸಕ್ತಿಯಾಗಲೀ ಇರುವುದಿಲ್ಲ. ವೈದ್ಯಕೀಯ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಅವರಲ್ಲಿ ಕನಿಷ್ಠ ಪ್ರಮಾಣದ ಕಾಳಜಿಯೂ ಕಾಣಬರುವುದಿಲ್ಲ.

▶▶ 8ನೇ ಪುಟಕ್ಕೆ...

# ಮಾನವೀಯತೆಯ ಸಾಕಾರಮೂರ್ತಿ ಡಾ. ಸಿ. ಪಳನಿವೇಲು

...7ನೇ ಪುಟದಿಂದ

### ಜಪಾನೀಯರಿಗೆ ಸೋತ ಮನಸ್ಸು

1994ರಲ್ಲಿ ಜಪಾನಿನ ಕ್ರೋಟೋದಲ್ಲಿ ನಡೆದ ಎಂಡೋಸ್ಕೋಪಿ ಸರ್ಜರಿಯ ನಾಲ್ಕನೆಯ ವಿಶ್ವ ಸಮ್ಮೇಳನದಲ್ಲಿ ಡಾ. ಪಳನಿವೇಲು ಅವರು ಪಾಲುಗೊಂಡು, ನಾಲ್ಕು ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದರು. ಈ ಸಮ್ಮೇಳನದಲ್ಲಿ ವಿಶ್ವದ ಬೇರೆಬೇರೆ ಭಾಗದಿಂದ ಎಂಡೋಸ್ಕೋಪಿಕ್ ಸರ್ಜನ್‌ಗಳು ಆಗಮಿಸಿದ್ದರು. ಪ್ರಬಂಧಗಳ ಮೌಲ್ಯಮಾಪನ ಮಾಡಲು ಪ್ರತ್ಯೇಕವಾದ ಜೂರಿ ಕಮಿಟಿಯಿರುತ್ತದೆ. ಈ ನಾಲ್ಕು ಪ್ರಬಂಧಗಳು ಸಮ್ಮೇಳನದಲ್ಲಿ ಶ್ರೇಷ್ಠ ಪ್ರಬಂಧಗಳು ಎಂದು ಪರಿಗಣಿತವಾಗುತ್ತವೆ. ಈ ಸಂದರ್ಭದಲ್ಲಿ ಡಾ. ಪಳನಿವೇಲು ಅವರು ಜಪಾನ್ ದೇಶವನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ಜಪಾನೀಯರ ಪ್ರಾಮಾಣಿಕತೆ, ಕರ್ತವ್ಯ ಮತ್ತು ಸಮಯ ಪ್ರಜ್ಞೆ ಹಾಗೂ ದೇಶಪ್ರೇಮ ಅವರಿಗೆ ಬಹಳ ಇಷ್ಟವಾಗುತ್ತವೆ.

ಜಪಾನ್ ದೇಶದಲ್ಲಿ ಎಂಡೊಸ್ಕೋಪಿಕ್ ರೊಬೋಟಿಕ್ ಸರ್ಜರಿಗಳನ್ನು ವಿಮಾ ರಕ್ಷಣೆಯ ವ್ಯಾಪ್ತಿಗೆ ತರಲಾಗಿದೆ. ಅಂದರೆ ಈ ಸರ್ಜರಿಯನ್ನು ಮಾಡಿಸಿಕೊಳ್ಳುವವರಿಗೆ ವಿಮೆಯಿಂದ ಹಣ ಬರುತ್ತದೆ. ಇವು ಹೊಸ ಸರ್ಜರಿಗಳಾದ ಕಾರಣ ಹಿಂದೆ ಇವುಗಳಿಗೆ ವಿಮೆ ಅನ್ವಯವಾಗುತ್ತಿರಲಿಲ್ಲ. ಅಲ್ಲಿನ ಸರ್ಕಾರದ ಆದೇಶದಿಂದ ಈ ಎರಡು ಸರ್ಜರಿಗಳು ವಿಮೆಯ ವ್ಯಾಪ್ತಿಗೆ ಬಂದವು. ಭಾರತದಲ್ಲಿ ಅನೇಕ ವಿಧವಾದ ಸಮಾಜ ಕಲ್ಯಾಣ ಯೋಜನೆಗಳಿವೆ. ಈ ಯೋಜನೆಗಳ ಮೂಲಕ ಇಂತಹ ಸರ್ಜರಿಗಳಿಗೊಳಗಾಗುವ ಫಲಾನುಭವಿಗಳಿಗೆ ಆರ್ಥಿಕ ಸಹಾಯ ಮಾಡಬೇಕೆಂದು ಡಾ. ಪಳನಿಮೇಲು ಅಭಿಪ್ರಾಯ ಪಡುತ್ತಾರೆ.

ಡಾ. ಪಳನಿವೇಲು ಅವರು ದಕ್ಷಿಣ ಕೊರಿಯಾ ಮತ್ತು ಚೀನಾ ದೇಶಗಳಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನಗಳಿಗೆ ಆಹ್ವಾನಿತರಾಗಿ ಪಾಲುಗೊಂಡಿದ್ದಾಗ ಅಲ್ಲಿನ ಶಸ್ತ್ರಚಿಕಿತ್ಸಕರಿಗೆ ಲ್ಯಾಪ್ರೋಸ್ಕೋಪಿಕ್ ಮತ್ತು ರೊಬೋಟಿಕ್ ಶಸ್ತ್ರಚಿಕಿತ್ಸೆಗಳಲ್ಲಿ ತರಬೇತಿ ನೀಡಿದರು.

### ದಿ ವಿಪಲ್ ಮ್ಯಾನ್

ಡಾ. ಪಳನಿವೇಲು ಅವರನ್ನು 'ದಿ ವಿಪಲ್ ಮ್ಯಾನ್' (Whipple) ಎಂದು ಕರೆದು ಗೌರವಿಸಲಾಗುತ್ತದೆ. ಜಗತ್ತಿನಲ್ಲಿ ಮೊದಲ ಬಾರಿಗೆ ಮೇದೋಜ್ಜೀರಕ ಗ್ರಂಥಿಯ ಕ್ಯಾನ್ಸರ್‌ನ್ನು 'ಲ್ಯಾಪ್ರೋಸ್ಕೋಪಿಕ್ ವಿಪಲ್ ಆಪರೇಷನ್' ಮಾಡಿ ಪೇಶೆಂಟ್ ಬೇಗ ಗುಣಮುಖರಾಗುವಂತೆ ಮಾಡಿದ್ದಾರೆ.

1998ರಲ್ಲಿ ಜೂನ್ 17ರಂದು ಮೇದೋಜ್ಜೀರಕ ಗ್ರಂಥಿಯ ಆಪರೇಷನ್‌ನನ್ನು ಯಶಸ್ವಿಯಾಗಿ ನಿರ್ವಹಣೆ ಮಾಡಿ ಡಾ. ಪಳನಿವೇಲು ಅವರು ಇತಿಹಾಸ ನಿರ್ಮಿಸಿದ್ದರು. ಆಪರೇಷನ್ ಆದ ಮೊದಲ ದಿನದಿಂದಲೇ ರೋಗಿ ಹರ್ಷಚಿತ್ತನಾಗಿದ್ದು ಒಂಬತ್ತನೆಯ ದಿನ ಆಸ್ಪತ್ರೆಯಿಂದ ಬಿಡುಗಡೆಯಾದನು. ನಂತರ ಡಾ. ಪಳನಿವೇಲು ಅವರು ಈ ಆಪರೇಷನ್‌ನ್ನು ಪರಿಷ್ಕರಣೆ ಮಾಡುತ್ತಾ ಅಂತಿಮವಾಗಿ ಮೇದೋಜ್ಜೀರಕ ಗ್ರಂಥಿಯ ಕ್ಯಾನ್ಸರ್‌ಗೆ ಸಂಪೂರ್ಣವಾಗಿ ಲ್ಯಾಪ್ರೋಸ್ಕೋಪಿಕ್ ವಿಪಲ್ ಶಸ್ತ್ರಚಿಕಿತ್ಸೆ ಮಾಡಿ ಯಶಸ್ವಿಯಾಗಬಹುದೆಂದು ನಿರೂಪಿಸಿದರು. ಇದಕ್ಕಾಗಿ ಡಾ. ಪಳಿನಿವೇಲು ಅವರಿಗೆ ಅಂತಾರಾಷ್ಟ್ರೀಯ ಮನ್ನಣೆ ದೊರೆಯಿತು.

### ಕೊಯಮತ್ತೂರಿಗೆ ವಿಶ್ವಪಟ್ಟಿಯಲ್ಲಿ ಸ್ಥಾನ

2016ರಲ್ಲಿ ಡಾ. ಸಿ. ಪಳನಿವೇಲು ಅವರು ಕೊಯಮತ್ತೂರಿನಲ್ಲಿ ಸಂಘಟಿಸಿದ 'ಇಂಟರ್‌ನ್ಯಾಷನಲ್ ಸಮ್ಮಿಟ್ ಫಾರ್ ಲ್ಯಾಪ್ರೋಸ್ಕೋಪಿ ಪ್ಯಾಂಕ್ರಿಯಾಟಿಕ್ ಡಿಸೆಕ್ಷನ್' (I.S.l.P.R) ಅಂತಾರಾಷ್ಟ್ರೀಯ ಶೃಂಗಸಭೆ ಕೊಯಮತ್ತೂರನ್ನು ವಿಶ್ವದ ಪ್ರಮುಖ ಆರೋಗ್ಯಕ್ಷೇತ್ರದ ವಿಚಾರ ಸಂಕೀರ್ಣ ನಡೆಯುವ ಸ್ಥಳವೆಂದು ಗುರುತಿಸಲು ಸಹಾಯ ಮಾಡಿತು. ವೈದ್ಯಕೀಯಕ್ಷೇತ್ರದಲ್ಲಿ ಪ್ರಸಿದ್ಧವಾಗಿರುವ ಲಂಡನ್, ಟೋಕಿಯೋ, ನ್ಯೂಯಾರ್ಕ್‌ಗಳ ಸಾಲಿಗೆ ಡಾ. ಪಳಿನಿವೇಲು ಅವರಿಂದಾಗಿ ಕೊಯಮತ್ತೂರು ಸೇರ್ಪಡೆಯಾಯಿತು. ಒಬ್ಬ ವ್ಯಕ್ತಿ ತನ್ನ ಊರು ಮತ್ತು ದೇಶಕ್ಕೆ ಮಾಡುವ ಗರಿಷ್ಠ ಸೇವೆ ಇದಾಗಿರುತ್ತದೆ. ಕ್ಯಾನ್ಸರ್ ಚಿಕಿತ್ಸೆಯಲ್ಲಿ ಲ್ಯಾಪ್ರೋಸ್ಕೋಪಿಕ್ ಮತ್ತು ರೋಬೋಟಿಕ್ ಮಾದರಿಯ ಶಸ್ತ್ರಚಿಕಿತ್ಸೆಗಳನ್ನು ಪ್ರಯೋಗಿಸಿ ಯಶಸ್ವಿಯಾದ ಕೀರ್ತಿ ಡಾ. ಪಳನಿವೇಲು ಅವರಿಗೆ ಸಲ್ಲುತ್ತದೆ.

### ಅನ್ನನಾಳ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯೊಂದು ಕ್ರಾಂತಿ

ಭಾರತದಲ್ಲಿ ಅನ್ನನಾಳದ ಕ್ಯಾನ್ಸರ್ ಸರ್ವೇಸಾಮಾನ್ಯವಾಗಿ ಕಂಡುಬರುವ ಕಾಯಿಲೆಯಾಗಿದೆ. ಸಾಂಪ್ರದಾಯಿಕ ಶೈಲಿಯಲ್ಲಿ ಅನ್ನನಾಳದ ಶಸ್ತ್ರಚಿಕಿತ್ಸೆ ಮಾಡಬೇಕಾದರೆ ಹೊಟ್ಟೆ ಮತ್ತು ಎದೆಯನ್ನು ಉದ್ದವಾಗಿ ಛೇದಿಸಬೇಕಾಗಿತ್ತು. ಅದರಲ್ಲಿ ಅನೇಕ ತೊಡಕುಗಳಿದ್ದವು. ಸಾಮಾನ್ಯವಾಗಿ ಸರ್ಜನ್‌ಗಳು ಇದನ್ನು ಮಾಡಲು ಹಿಂಜರಿಯುತ್ತಿದ್ದರು.

ಡಾ. ಪಳನಿವೇಲು ಅವರು ಗ್ಯಾಸ್ಟ್ರೋಎಂಟರಾಲಜಿ ಕ್ಯಾನ್ಸರ್ ಸರ್ಜನ್ ಆಗಿ ಅನ್ನನಾಳದ ಶಸ್ತ್ರಚಿಕಿತ್ಸೆಯಲ್ಲಿ ಸಾಕಷ್ಟು ಸಂಶೋಧನೆಗಳನ್ನು ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಶಸ್ತ್ರಚಿಕಿತ್ಸೆಯಲ್ಲಿ ವಿವಿಧ ಮಾದರಿಗಳನ್ನು ಪ್ರಯೋಗ ಮಾಡಿದ್ದಾರೆ. 1997ರಲ್ಲಿ ಕೊಯಮತ್ತೂರಿನಲ್ಲಿ ಅನ್ನನಾಳದ ಶಸ್ತ್ರಚಿಕಿತ್ಸೆಯ ಅಂಗವಾಗಿ ಎದೆ ಮತ್ತು ಹೊಟ್ಟೆಯಲ್ಲಿ ಕೆಲವು ಸಣ್ಣರಂಧ್ರಗಳೊಂದಿಗೆ 'ಕನಿಷ್ಠ ಆಕ್ರಮಣಕಾರಿ ಅನ್ನನಾಳದ ಶಸ್ತ್ರಚಿಕಿತ್ಸೆ' (Minimally Invasive Esophagectomy) ಮಾಡಿ ಯಶಸ್ವಿಯಾದರು. ಈ ಯಶಸ್ಸು ಅವರಿಗೆ ಬೆಂಗಳೂರು, ಕೊಚ್ಚಿನ್, ಅಹಮದಾಬಾದ್, ಇಟಲಿ. ಲಂಡನ್ ಮೊದಲಾದ ಕಡೆ ಇದೇ ಮಾದರಿಯ ಶಸ್ತ್ರಚಿಕಿತ್ಸೆ ಮಾಡಲು ಆಹ್ವಾನ ತಂದುಕೊಟ್ಟಿತ್ತು. ಡಾ. ಪಳನಿವೇಲು ಅವರು ಆ ಸ್ಥಳಗಳಲ್ಲಿ ನಡೆದ 'ಅನ್ನನಾಳ ಕ್ಯಾನ್ಸರ್ ಶಸ್ತ್ರಚಿಕಿತ್ಸಾ' ವಿಚಾರಸಂಕಿರಣಗಳಲ್ಲಿ ಭಾಗವಹಿಸಿ ಅಲ್ಲಿನ ಸರ್ಜನ್‌ಗಳಿಗೆ ಪ್ರಾಯೋಗಿಕವಾಗಿ ಈ ಶಸ್ತ್ರಚಿಕಿತ್ಸೆಯನ್ನು ಮಾಡಿ ಅವರಿಂದ ಮೆಚ್ಚುಗೆ ಪಡೆದರು. ಡಾ. ಪಳನಿವೇಲು ಅವರು ಅಲ್ಲೆಲ್ಲಾ ಮೆಕ್‌ಕೌನ್ ಅನ್ನನಾಳ ತೆಗೆಯುವ ಶಸ್ತ್ರಚಿಕಿತ್ಸೆಯ ಮೂರು ಹಂತಗಳನ್ನು ಕನಿಷ್ಠ ಆಕ್ರಮಣಕಾರಿ ವಿಧಾನದ ಮೂಲಕ ತೆಗೆದು ಅದರ ಪ್ರದರ್ಶನ ನೀಡಿದರು. ಈಗ 'ಥೋರಾಕೋಸ್ಕೋಪಿಕ್ ಅನ್ನನಾಳ ಶಸ್ತ್ರಚಿಕಿತ್ಸೆ ಇನ್ ಫ್ರೋನ್ ಪೊಸಿಷನ್' ಜಗತ್ತಿನಾದ್ಯಂತ ಡಾ. ಪಳನಿವೇಲು ತಂತ್ರವೆಂದು ಖ್ಯಾತಿ ಪಡೆದಿದೆ. ಇಂದು ವಿಶ್ವದ ಎಲ್ಲೆಡೆ ಕ್ಯಾನ್ಸರ್ ಸರ್ಜನ್‌ಗಳು ಈ ತಂತ್ರವನ್ನು ಬಳಸುತ್ತಾರೆ. ಅನ್ನನಾಳದ ಕ್ಯಾನ್ಸರ್‌ಗೆ ಸಂಬಂಧಪಟ್ಟ ಶಸ್ತ್ರಚಿಕಿತ್ಸೆಯಲ್ಲಿ ಭಾರತದ ಶಸ್ತ್ರಚಿಕಿತ್ಸಕರೊಬ್ಬರು ಕೊಟ್ಟ ಅಮೂಲ್ಯ ಕೊಡುಗೆಯೆಂದು ಇದನ್ನು ಮಾನ್ಯ ಮಾಡಲಾಗಿದೆ.

### ಇಂಗ್ಲೆಂಡ್‌ನಲ್ಲಿ ಗೌರವ ಡಾಕ್ಟರೇಟ್ ಮತ್ತು ರಾಯಲ್ ಕಾಲೇಜ್‌ನ ಫೆಲೋಶಿಪ್

ಇಂಗ್ಲೆಂಡಿನಲ್ಲಿ ಡಾ. ಪಳನಿವೇಲು ಅವರು ಯಾವುದೇ ವೈದ್ಯಕೀಯ ವಿಷಯಗಳ ಬಗ್ಗೆ ಅಧ್ಯಯನ ನಡೆಸದಿದ್ದರೂ ಅಲ್ಲಿನ 'ಬ್ರಿಟಿಷ್ ಸರ್ಜಿಕಲ್ ಸೊಸೈಟಿ'ಯಲ್ಲಿ ಬೋಧಕರಾಗುವ ಅವಕಾಶ ದೊರೆಯಿತು. ಗ್ರೇಟ್‌ಬ್ರಿಟನ್ ಮತ್ತು ಐರ್ಲ್ಯಾಂಡ್‌ಗಳ ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸಕರ ಸಂಘದ (ALSGBI - Association of Laparoscopic Surgeons of Great Britain and Ireland) ಗೌರವ ಫೆಲೋ ಆಗಿ ನೇಮಕಗೊಂಡರು. ಚೆಲ್ಮ್ಸ್‌ಫೋರ್ಡ್ ಹಾಗೂ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳು ಇವರಿಗೆ ಆರೋಗ್ಯವಿಜ್ಞಾನಕ್ಕೆ ಸಂಬಂಧಿಸಿದಂತೆ ಗೌರವ ಡಾಕ್ಟರೇಟ್‌ಗಳನ್ನು ನೀಡಿದವು. ಎಡನ್‌ಬರ್ಗ್‌ನ ಪ್ರತಿಷ್ಠಿತ ವೈದ್ಯಕೀಯ ಸಂಸ್ಥೆಯಾಗಿರುವ ಅಂತಾರಾಷ್ಟ್ರೀಯ ಖ್ಯಾತಿಯ 'ರಾಯಲ್ ಕಾಲೇಜ್ ಆಫ್ ಸರ್ಜನ್'ನಿಂದ ಇವರಿಗೆ 'ಫೆಲೋಶಿಪ್ ಅಡ್ ಹೋಮಿನೆಮ್' ಕೂಡ ದೊರೆಯಿತು.

ರಾಯಲ್ ಕಾಲೇಜಿನಿಂದ ಇಂತಹ ಪುರಸ್ಕಾರ ಪಡೆಯುವುದು ತುಂಬಾ ಮಹತ್ತ್ವದ ವಿಚಾರ. ವೈದ್ಯಕೀಯ ಕ್ಷೇತ್ರದಲ್ಲಿ ಅಮೂಲ್ಯ ಸಾಧನೆ ಮಾಡಿದವರಿಗೆ ಮಾತ್ರ ಇಂತಹ ಪುರಸ್ಕಾರಗಳು ದೊರಕಿವೆ. ಭಾರತದ ಗ್ರಾಮೀಣ ಪ್ರದೇಶದಿಂದ ಬಂದ ವ್ಯಕ್ತಿಯೊಬ್ಬರಿಗೆ ದೊರೆತ ಈ ಅತ್ಯುನ್ನತ ಗೌರವ ಎಲ್ಲ ಭಾರತೀಯರಿಗೆ ದೊರೆತ ಗೌರವವಾಗಿದೆ. ಇಂತಹ ಅಪೂರ್ವ ಸಾಧನೆ ಮಾಡಿದ ಡಾ. ಪಳನಿವೇಲು ಅವರನ್ನು ಭಾರತೀಯ ವೈದ್ಯಕೀಯ ಲೋಕ ಹಾರ್ದಿಕವಾಗಿ ಅಭಿನಂದಿಸಿತು. ಭಾರತೀಯ ವೈದ್ಯರೊಬ್ಬರಿಗೆ ದೊರೆತ ಅತ್ಯುನ್ನತ ಗೌರವ ಇದಾಗಿದೆ.



ರಾಷ್ಟ್ರಪತಿ ದ್ರೌಪತಿ ಮುರ್ಮು ಜೊತೆ ಡಾ. ಸಿ. ಪಳನಿವೇಲು ದಂಪತಿಗಳು

### ರೋಬೋಟಿಕ್ ಶಸ್ತ್ರಚಿಕಿತ್ಸೆ

ರೋಬೋಟಿಕ್ ಶಸ್ತಚಿಕಿತ್ಸೆಯಲ್ಲಿ ಮಾನವರೂಪಿ ರೋಬೋಟ್‌ಗಳನ್ನು ಬಳಸದೆ ಕಂಪ್ಯೂಟರ್ ತಂತ್ರಜ್ಞಾನವರ್ಧಿತ ಸಾಧನವನ್ನು ಬಳಸಿಕೊಂಡು ಶಸ್ತ್ರಚಿಕಿತ್ಸೆ ಮಾಡುತ್ತಾರೆ. ಶಸ್ತ್ರಚಿಕಿತ್ಸೆಯ ಕ್ಷೇತ್ರದಲ್ಲಿ ರೋಬೋಟಿಕ್ ಪ್ಲಾಟ್‌ಫಾರಂಗಳಲ್ಲಿ 3D ದೃಷ್ಟಿ, ICG ಇಮೇಜಿಂಗ್‌ಗಳಿಂದಾಗಿ ಪ್ರಾಥಮಿಕ ಹಂತದ ಕ್ಯಾನ್ಸರ್ ಗೆಡ್ಡೆ ಹಾಗೂ ಅದರ ದುಗ್ಧರಸ ಹರಡುವಿಕೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬಹುದು.

2016ರಿಂದ ಡಾ. ಸಿ. ಪಳನಿವೇಲು ಅವರು ರೋಬೋಟಿಕ್ ವಿಪಲ್ ಆಪರೇಷನ್ ಮಾಡುತ್ತಾ ಬಂದಿದ್ದಾರೆ. ಕೊಯಮತ್ತೂರಿನಲ್ಲಿರುವ GEM ಆಸ್ಪತ್ರೆ ಲ್ಯಾಪ್ರೋಸ್ಕೊಪಿಕ್ ಗೈನಕ್ (Laproscopic Gyenec) ಶಸ್ತ್ರಚಿಕಿತ್ಸೆಯಲ್ಲೂ ಪರಿಣತಿ ಪಡೆದ ಕೇಂದ್ರವೆಂದು ಪ್ರಸಿದ್ಧಿಯಾಗಿದೆ. ಜೊತೆಗೆ ಈ ಆಸ್ಪತ್ರೆ 'ಬೊಜ್ಜು ಬೈಪಾಸ್ ಸರ್ಜರಿಗೂ' ಖ್ಯಾತಿ ಪಡೆದಿದೆ. ಇದಕ್ಕೆ ಸಂಬಂಧಪಟ್ಟಂತೆ ಅನೇಕ ಸರ್ಜರಿಗಳನ್ನು ಡಾ. ಪಳನಿವೇಲು ಮಾಡಿಕೊಂಡು ಬಂದಿದ್ದಾರೆ.

### Gastro Enterology and Medical Centre (GEM)

2001ರಲ್ಲಿ ಕೊಯಮತ್ತೂರಿನಲ್ಲಿ 'ಗ್ಯಾಸ್ಟ್ರೋ ಎಂಟರಾಲಜಿ ಮತ್ತು ಮೆಡಿಕಲ್ ಸೆಂಟರ್' (GEM - Gastro Enterology and Medical Centre) ಎನ್ನುವ ಹೆಸರಿನಲ್ಲಿ 75 ಹಾಸುಗೆಗಳ ಆಸ್ಪತ್ರೆಯನ್ನು ಪ್ರಾರಂಭಿಸಿದ್ದಾರೆ. ಈ ಆಸ್ಪತ್ರೆಯಲ್ಲಿ ಆರ್ಥಿಕವಾಗಿ ದುರ್ಬಲವಾಗಿರುವ ಜನರಿಗೂ ಆರೈಕೆ ಮಾಡುವ ವ್ಯವಸ್ಥೆಯಿದೆ. GEM ಆಸ್ಪತ್ರೆ ವಿಸ್ತರಣೆಯಾಗುತ್ತಾ ಬಂದಿದೆ. ಕೊಯಮತ್ತೂರಿನಲ್ಲಿ ಮುನ್ನೂರು ಹಾಸುಗೆಗಳ ಜೆಮ್ ಆಸ್ಪತ್ರೆಯಿದೆ. ಈ ಆಸ್ಪತ್ರೆ ಮುಂಬೈ, ದೆಹಲಿ, ರಾಜ್‌ಕೋಟ್, ಅಹಮದಾಬಾದ್, ಪುಣೆ, ಕಲ್ಕತ್ತಾ ಇಂದೂರು ಹಾಗೂ ಚೆನ್ನೈನಲ್ಲೂ ತನ್ನ ಕೇಂದ್ರಗಳನ್ನು ತೆರೆದಿದೆ.

### ವಿಶ್ವ ದಾಖಲೆ

ಡಾ. ಪಳನಿವೇಲು ಅವರು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವುದರ ಜೊತೆಗೆ ತಮಿಳುನಾಡಿನಾದ್ಯಂತ ಆರೋಗ್ಯ ಶಿಬಿರಗಳನ್ನು ವ್ಯವಸ್ಥೆ ಮಾಡಿ, ಜನಸಾಮಾನ್ಯರಲ್ಲಿ ಆರೋಗ್ಯದ ವಿಚಾರದಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. 2002ರಲ್ಲಿ ಇವರ GEM ಆಸ್ಪತ್ರೆಯ ವಾರ್ಷಿಕೋತ್ಸವದ ದಿನದಂದು ಹರ್ನಿಯಾ ಕಾಯಿಲೆಗೆ ಸಂಬಂಧಪಟ್ಟಂತೆ ಒಂದೇ ದಿನದಲ್ಲಿ 100 ಲ್ಯಾಪ್ರೊಸ್ಕೋಪಿಕ್ ಸರ್ಜರಿ ಮಾಡಲಾಯಿತು. ಬೆಳಿಗ್ಗೆ 7:00ಕ್ಕೆ ಪ್ರಾರಂಭವಾದ ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆಯ ಕಾರ್ಯ ನಿರಂತರವಾಗಿ ನಡೆದು ರಾತ್ರಿ 9.45ಕ್ಕೆ ಪೂರ್ಣಗೊಂಡಿತು. ಈ ಎಲ್ಲಾ ಶಸ್ತ್ರಚಿಕಿತ್ಸೆಯನ್ನು ಡಾ. ಪಳನಿವೇಲು ಅವರೇ ಮಾಡಿದರು. ಇವರ ಸಹಾಯಕ್ಕಿದ್ದ ತಂಡಗಳು ಬದಲಾದವು. ಒಂದೇ ದಿನ 100 ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಿದ ವಿಶ್ವ ದಾಖಲೆ ಡಾ. ಪಳನಿವೇಲು ಅವರ ಹೆಸರಿನಲ್ಲಿದೆ.

GEM ಆಸ್ಪತ್ರೆ ಅತ್ಯಾಧುನಿಕ ಟೆಲಿ–ಟೀಚಿಂಗ್ ಸೌಲಭ್ಯವನ್ನು ಹೊಂದಿದೆ. ಇಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಸ್ತ್ರಚಿಕಿತ್ಸಕರಿಗೆ ಮತ್ತು ಕಲಿಕೆಯಲ್ಲಿ ಆಸಕ್ತಿಯುಳ್ಳ ಯುವ ಸರ್ಜನ್‌ಗಳಿಗೆ ಒಂದೆಡೆಯಲ್ಲಿಯೇ ಬೋಧಿಸುವ ವ್ಯವಸ್ಥೆಯನ್ನು ಹೊಂದಿದೆ.

### ಅಂಗಾಂಗ ಕಸಿ ಮತ್ತು A.M.A.S

ಭಾರತದಲ್ಲಿ ಲ್ಯಾಪ್ರೋಸ್ಕೋಪಿಕ್ ಮೂಲಕ ಜೀವಂತ ದಾನಿಯಿಂದ ಯಕೃತ್ತನ್ನು (Liver) ಪಡೆದು ಅದನ್ನು ಬೇರೆಯವರಿಗೆ ಅಳವಡಿಸಿದ ಕೀರ್ತಿ ಕೂಡ ಡಾ. ಪಳಿನಿವೇಲು ಅವರಿಗೆ ದೊರಕಿದೆ.

ಡಾ. ಪಳನಿವೇಲು ಅವರ ಮತ್ತೊಂದು ಸಾಧನೆ ಎಂದರೆ ಭಾರತದ ಶಸ್ತ್ರಚಿಕಿತ್ಸಕರ ಸಂಘದ ಸಹಾಯದಿಂದ 'ಅಸೋಸಿಯೇಷನ್ ಆಫ್ ಮಿನಿಮಲ್ ಆಕ್ಸಸ್ ಸರ್ಜನ್ಸ್ ಆಫ್ ಇಂಡಿಯಾ' (A.M.A.S.) ಎನ್ನುವ ಸಂಸ್ಥೆಯನ್ನು ಪ್ರಾರಂಭಿಸಿರುವುದು. ಇದು ಡಾ. ಪಳನಿವೇಲು ಅವರ ಕನಸಿನ ಕೂಸು. ಇದರ ಮೊದಲ ಅಧಿವೇಶನ ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಜರುಗಿತು. ಇದೇ ಸಂದರ್ಭದಲ್ಲಿ ಆಂಧ್ರಪ್ರದೇಶದ ಎನ್.ಟಿ.ಆರ್.ಆರೋಗ್ಯ ವಿಶ್ವವಿದ್ಯಾನಿಲಯವು ಲ್ಯಾಪ್ರೋಸ್ಕೋಪಿಕ್ ಮತ್ತು ರೋಬೋಟಿಕ್ ಶಸ್ತ್ರಚಿಕಿತ್ಸಾಕ್ಷೇತ್ರದಲ್ಲಿ ಡಾ. ಪಳನಿವೇಲು ಅವರು ಮಾಡಿದ ಸಾಧನೆಯನ್ನು ಗಮನಿಸಿ ಅವರಿಗೆ ಗೌರವ ಡಾಕ್ಟರೇಟ್ ನೀಡಿದೆ.

### ಎರಡನೆಯ ಸಲ ಡಾ. ಬಿ.ಸಿ. ರಾಯ್ ರಾಷ್ಟ್ರೀಯ ಪ್ರಶಸ್ತಿ

2015ರಲ್ಲಿ ಭಾರತ ಸರ್ಕಾರ 'ಶ್ರೇಷ್ಠ ವೈದ್ಯಕೀಯ ವ್ಯಕ್ತಿ' ಎಂದು ಎರಡನೆಯ ಸಲ ಡಾ. ಬಿ. ಸಿ. ರಾಯ್ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿತು. ಅದನ್ನು ಅಂದಿನ ರಾಷ್ಟ್ರಪತಿಗಳಾದ ಪ್ರಣಬ್ ಮುಖರ್ಜಿ ಅವರು ವಿತರಿಸಿದರು.

### ಸುಖಿ ಸಂಸಾರ

ಡಾ. ಪಳನಿವೇಲು ಅವರದು ಸುಖಿ ಕುಟುಂಬ. ಅವರ ಎಲ್ಲ ಯಶಸ್ಸಿನ ಹಿಂದೆ ಶ್ರೀಮತಿ ಜಯ ಪಳನಿವೇಲು ಇದ್ದಾರೆ. ಡಾ. ಪಳನಿವೇಲು ದಂಪತಿಗಳಿಗೆ ಇಬ್ಬರು ಮಕ್ಕಳು. ಮಗ ಡಾ. ಪ್ರವೀಣ್‌ರಾಜ್, ಕೊಯಮತ್ತೂರು ಆಸ್ಪತ್ರೆಯ ನಿರ್ವಹಣೆ ಮಾಡುತ್ತಿದ್ದಾರೆ. ಅವರು ಸಹ ಗ್ಯಾಸ್ಟ್ರೋ–ಎಂಟ್ರೊಲಜಿಸ್ಟ್. ಇವರ ಸೊಸೆ ಪ್ರಭಾ. ಮಗಳು ಪ್ರಿಯ. ಅಳಿಯ ಡಾ. ಸೆಂಥಿಲ್‌ನಾಥನ್, ಸರ್ಜಿಕಲ್ ಗ್ಯಾಸ್ಟ್ರೋ ಎಂಟ್ರಾಲಜಿಸ್ಟ್. ಚೆನ್ನೈನ GEM ಆಸ್ಪತ್ರೆಯ ಮುಖ್ಯಸ್ಥರಾಗಿದ್ದಾರೆ. ನಾಲ್ವರು ಮೊಮ್ಮಕ್ಕಳಿರುವ ಅವರ ಕುಟುಂಬ ಹರ್ಷದಾಯಕವಾಗಿದೆ.

### ದೊಡ್ಡ ನಮಸ್ಕಾರ!

ವಾಸ್ತವವಾಗಿ, ಡಾ. ಪಳನಿವೇಲು ಅವರು ದೈವಭಕ್ತರು, ತಮ್ಮ ಕರ್ತವ್ಯ ಮಾಡಬೇಕು, ಪ್ರತಿಫಲವನ್ನು ಅವನಿಗೆ ಬಿಡಬೇಕು ಎನ್ನುವವರು. ಜೊತೆಗೆ ಅವರ ಜ್ಞಾನದಾಹ ಮತ್ತು ಹೊಸದನ್ನು ಆವಿಷ್ಕಾರ ಮಾಡಬೇಕು ಎನ್ನುವ ತುಡಿತ ನಿಲ್ಲುವಂತಹದಲ್ಲ. ಪ್ರತಿದಿನ, ಪ್ರತಿ ಗಳಿಗೆ ಮಾನವಲೋಕಕ್ಕೆ ವಿಶೇಷವಾಗಿ ವೈದ್ಯಕೀಯ ಕ್ಷೇತ್ರಕ್ಕೆ ಒಳಿತು ಮಾಡಬೇಕು ಎನ್ನುತ್ತಿರುವ ಈ ಕರ್ಮಯೋಗಿ ಡಾ. ಪಳನಿವೇಲು ಅವರಿಗೆ ವೈಯಕಿಕ್ತವಾಗಿ ಹಾಗೂ ನಮ್ಮ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ಪರವಾಗಿ ಅಭಿನಂದನೆಗಳು ಮತ್ತು ಒಂದು ದೊಡ್ಡ ನಮಸ್ಕಾರ!

ಮತ್ತೊಮ್ಮೆ ಕನ್ನಡಿಗರಿಗೆ ಡಾ. ಪಳನಿವೇಲು ಅವರನ್ನು ಸಮರ್ಥವಾಗಿ ಪರಿಚಯಿಸಿದ ನಾಲ್ವರು ಅನುವಾದಕರಿಗೆ ಹಾರ್ದಿಕ ಅಭಿನಂದನೆಗಳು.

▪ ನಿರೂಪಣೆ: ಶ್ರೀವತ್ಸ

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**